

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor: MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 07 | Issue : 29 | Thursday 03-10-2024 | E-mail : maruti.b.hosamani76@gmail.com | Page: 4 | Price : Rs. 1/-


## "ಟೆಕ್ವಾಂಡೋ ಗರ್ಲ್" ಮೈಸೂರು ದಸರಾ ಚಲನ ಚಿತ್ರೋತ್ಸವಕ್ಕೆ ಆಯ್ಕೆ



ಸಿಹಿ ಕಹಿ ಸುದ್ದಿ

**ಬೆಂಗಳೂರು :** ಆತ್ರೇಯ ಕ್ರಿಯೇಶನ್ಸ್ ಬೆಂಗಳೂರ ಅವರ ಡಾ, ಸುಮಿತಾ ಪ್ರವೀಣ್ ಚೊಚ್ಚಲ ನಿರ್ಮಾಣದ "ಟೆಕ್ವಾಂಡೋ ಗರ್ಲ್' ಸೌತ್ ಕೋರಿಯಾದ ಸಮರ ಕಲೆಯ ಚಿತ್ರ ವಿಶ್ವ ವಿಖ್ಯಾತ ಮೈಸೂರು ದಸರಾ ಚಲನ ಚಿತ್ರೋತ್ಸವಕ್ಕೆ ಆಯ್ಕೆಯಾಗಿದ್ದು. ಇದೆ ಅಕ್ಟೋಬರ್. 5 ರಂದು ಮೈಸೂರಿನ ಐನೋಕ್ಷದಲ್ಲಿ ಪ್ರದರ್ಶಿತವಾಗಲಿದೆ.

ರವೀಂದ್ರ ವಂಶಿ ಆಕ್ಷನ್ ಕಟ್ ಹೇಳಿರುವ ಈ ಚಿತ್ರದಲ್ಲಿ ಹೆಣ್ಣು ಮಕ್ಕಳು ತಮಗೆ ತಾವೇ ಹೇಗೆ ರಕ್ಷಿಸಿ ಕೊಳ್ಳಬೇಕು ಎಂಬುದರ ಮಹತ್ತರ ಸಂದೇಶವಿದೆ. ಸುಮಾರು 200 ಮಕ್ಕಳಿಗೆ ಅವಕಾಶ ಕಲ್ಪಿಸಿದ ಸಾಮಾಜಿಕ ಕಳಕಳಿ ಇರುವ ಈ ಚಿತ್ರದಲ್ಲಿ ಮಗಳು ಋತು ಸ್ಪರ್ಶ ಸುಮಾರು ಎಂಟು ವರ್ಷಗಳಿಂದ ಟೆಕ್ವಾಂಡೋ ಸಮರ ಕಲೆಯನ್ನ ಕಲಿತು ನಾಲ್ಕು ಬಾರಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸಿ ಬ್ಲಾಕ್ ಬೆಲ್ಟ್ ಪಡೆದಿದ್ದಾಳೆ. ಜೊತೆಗೆ ಅಂತಾರಾಷ್ಟ್ರೀಯ ನೃತ್ಯಗಾರ್ತಿಯು ಆಗಿರುವ ಈ ಅಪ್ಪಟ ದೇಸಿ ಕಲಾ ಪ್ರತಿಭೆಯ ಪೂರ್ಣ ಪ್ರಮಾಣದ ಮೊದಲ ಚಿತ್ರವಾಗಿದೆ. ಈಗಾಗಲೇ ಕನ್ನಡದ ಬಾಲ್ಯ, ಗಂಗೆ ಗೌರಿ, ತಾರಕೇಶ್ವರ ಚಿತ್ರಗಳಲ್ಲಿ ಅಭಿನಯಿಸಿದ್ದು, ತಾರಕೇಶ್ವರ ಚಿತ್ರದಲ್ಲಿ ಬಾಲ ಸುಬ್ರಹ್ಮಣ್ಯನಾಗಿ ಬಾಲಕನ ಪಾತ್ರದಲ್ಲಿ ಕಾಣಿಸಿದ್ದಾಳೆ.

ತಾರಾ ಬಳಗದಲ್ಲಿ ಋತು ಸ್ಪರ್ಶ, ಡಾ, ಸುಮಿತ ಪ್ರವೀಣ್ , ಪ್ರವೀಣ್ ಸಿ ಭಾನು , ಪಲ್ಲವಿ ರಾವ್, ಸಹನಶ್ರೀ , ವಿಘ ರವಿ, ಸ್ವಾತಿ ಶಿವಮೊಗ್ಗ, ರೇಖಾ ಕೂಡ್ಲಗಿ ಮೊದಲಾದವರು ಅಭಿನಯಿಸಿದ್ದು, ತಾಂತ್ರಿಕ ವರ್ಗದಲ್ಲಿ ಛಾಯಾಗ್ರಹಣ ಪ್ರಮೋದ್ ಭಾರತೀಯ, ಸಾಹಿತ್ಯ ಮನೋಜಕುಮಾರ, ಸಂಗೀತ ಎಂ.ಎಸ್ ತ್ಯಾಗರಾಜ, ಸಾಹಸ ವಿಘ ರವಿ, ಸಂಕಲನ ರವಿಚಂದನ್ ಸಿ, ಧ್ವನಿಗ್ರಹಣ ಕೃಷ್ಣಮೂರ್ತಿ, ಪ್ರಸಾಧನ ವೆಂಕಟೇಶ, ಕಲೆ ಚೇತನ್, ಪಿಆರ್ ಓ ಆರ್.ರಜನಿಕಾಂತ್, ಪತ್ರಿಕಾ ಸಂಪರ್ಕ ವೀರೇಂದ್ರ ಬೆಳ್ಳಿಚುಕ್ಕಿ, ಡಾ, ಪ್ರಭು ಗಂಜಿಹಾಳ, ಡಾ, ವೀರೇಶ ಹಂಡಿಗಿ , ಸಹನಿರ್ದೇಶನ ಅನಿಲ್, ಯುವಸೂರ್ಯ, ಸೂರಿ, ರಚನೆ ನಿರ್ದೇಶನ ರವೀಂದ್ರ ವಂಶಿ ಅವರದಿದ್ದು ಈ ಚಿತ್ರದ ಸಹ ನಿರ್ಮಾಪಕರು ಪ್ರವೀಣ್ ಸಿ ಭಾನು , ನಿರ್ಮಾಪಕರು ಡಾ, ಸುಮಿತ ಪ್ರವೀಣ್ ಅವರಾಗಿದ್ದಾರೆ. ಪ್ರೇಕ್ಷಕರು ಮೈಸೂರು ಚಿತ್ರೋತ್ಸವದಲ್ಲಿ ಚಿತ್ರವನ್ನು ವೀಕ್ಷಿಸಿ ಬಾಲ ಪ್ರತಿಭೆಯನ್ನು ಮತ್ತು ತಂಡವನ್ನು ಪ್ರೋತ್ಸಾಹಿಸಬೇಕು ಎಂದು ಡಾ, ಸುಮಿತ ಪ್ರವೀಣ ಕೋರಿದ್ದಾರೆ.

**ವರದಿ: ಡಾ.ಪ್ರಭು ಗಂಜಿಹಾಳ ಮೊ:9448775346**

## ಎಸ್.ಎಸ್.ಎಲ್.ಸಿ ಪರೀಕ್ಷೆ ಕೇಂದ್ರ ಮಾಡಬೇಕು ಎಂದು ಪ್ರತಿಭಟನೆ




ಸಿಹಿ ಕಹಿ ಸುದ್ದಿ,

**ಗೋಲಗೇರಿ :** ಸಿಂದಗಿ ತಾಲೂಕಿನ ಸಮೀಪದ ಗೋಲಗೇರಿ ಪಟ್ಟಣದಲ್ಲಿ ಇಂದು ಬಹುಜನ ದಲಿತ ಸಂಘರ್ಷ ಸಮಿತಿ ಯಿಂದ ಪಟ್ಟಣ ಹಾಗೂ ರಸ್ತೆ ಬಂದ ಮಾಡಿ ಹೋರಾಟ ಮಾಡಿದರು, ಈ ಪಟ್ಟಣವು ಎಲ್ಲಾ ಮೂಲಭೂತ ಸೌಕರ್ಯಗಳನ್ನು ಹೊಂದಿದೆ. ಆದರೂ ಎಸ್.ಎಸ್.ಎಲ್.ಸಿ ಕೇಂದ್ರ ಮಾಡಿಲ್ಲ, ಮುಂಬರುವ ಪರೀಕ್ಷೆಯನ್ನು ನಮ್ಮ ಪಟ್ಟಣದಲ್ಲಿ ಕೇಂದ್ರ ಆಗಬೇಕು, ಶಿಕ್ಷಣ ಇಲಾಖೆ ಇದನ್ನು ಗಂಭೀರವಾಗಿ ಪರಿಗಣಿಸ ಬೇಕು ಬೇರೆ ಊರಿಗೆ ಹೋಗಿ ಪರೀಕ್ಷೆ ಬರೆಯಲು ಬಹಳ ಕಷ್ಟ ಆಗುತ್ತದೆ, ಪಟ್ಟಣದಲ್ಲಿ ಯೋಗ್ಯವಾಗಿರುವ ಶಾಲೆಯನ್ನು ಗುರುತಿಸಿ ಪರೀಕ್ಷೆ ಕೇಂದ್ರವನ್ನು ಮಂಜೂರ ಮಾಡಿಸಿ ಆದೇಶ ಮಾಡಿ ಕೊಡಬೇಕು, ಒಂದು ವೇಳೆ ವಿಳಂಬವಾದಲ್ಲಿ ಬಹುಜನ ದಲಿತ ಸಂಘರ್ಷ ಸಮಿತಿಯಿಂದ ಜಿಲ್ಲಾ ಶಾಖೆ ತಾಲ್ಲೂಕು ಶಾಖೆಯ ನೇತೃತ್ವದಲ್ಲಿ ಮುಂದಿನ ದಿನದಲ್ಲಿ ತಾಲ್ಲೂಕು ಶಿಕ್ಷಣ ಇಲಾಖೆಯ ಕಾರ್ಯಾಲಯ ಎದುರು ಉಗ್ರವಾದ ಪ್ರತಿಭಟನೆ ಮಾಡ ಬೇಕಾಗುತ್ತದೆ, ಎಂದು ಎಚ್ಚರಿಕೆ ನೀಡಿದರು, ಈ ಪ್ರತಿಭಟನೆ ನೇತೃತ್ವವನ್ನು ವಹಿಸಿದ, ಬಹುಜನ ದಲಿತ ಸಂಘರ್ಷ ಸಮಿತಿ ಜಿಲ್ಲಾ ಕಾರ್ಯಧ್ಯಕ್ಷರಾದ ಶ್ರೀಶೈಲ ಜಾಲವಾದಿ ಯವರು, ಪ್ರತಿಭಟನೆಯ ಸ್ಥಳಕ್ಕೆ ಆಗಮಿಸಿದ ತಾಲ್ಲೂಕು ಕ್ಷೇತ್ರ ಶಿಕ್ಷಣ ಅಧಿಕಾರಿಗಳಾದ ಯಡ್ರಾಮಿ, ಯವರಿಗೆ ಮನವಿ ಸಲ್ಲಿಸಿದರು, ಕಾಂಗ್ರೆಸ್ ಮುಖಂಡರಾದ, ಶಿವು ಹತ್ತಿ, ಮಡು ನಾಯ್ಕಾಡಿ, ಹುಯೋಗಿ ತಳ್ಳೋಳ್ಳಿ, ಹಾಗೂ ರಾಘವೇಂದ್ರ ಗುಡಿಮನಿ ಜಯಶ್ರೀ ಬ್ಯಾ-ಕೋಡ ಪ್ರಕಾಶ ತಳಕೇರಿ ವಿಜಯಲಕ್ಷ್ಮಿ ಪಾಟೀಲ ರಾಜಶೇಖರ ಕುದರಿ ಅರುಣಕುಮಾರ ಸಿಂಗೆ ಪರಸುರಾಮ, ಗೋಲ್ಲಾಳ ಬ್ಯಾಚಬಾಳ ನಿಂಗಣ್ಣ ಚಲವಾದಿ ಮೊದಿನ ಶಾಬಾದಿ ಸಲೀಮ ಮುಲ್ಲಾ ಹಾಗೂ ಶಾಲೆಯ ಮಕ್ಕಳು, ಪಾಲಕರು ಈ ಹೋರಾಟದಲ್ಲಿ ಭಾಗವಹಿಸಿದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:**
**ಭೀಮಪ್ಪ.ಹಚ್ಯಾಳ**
**.ದೇವರ ಹಿಪ್ಪರಗಿ**

## ವಿಶ್ವ ಮೆಚ್ಚುವ ಮಹಾತ್ಮ ಗಾಂಧೀಜಿ ಶಾಸ್ತ್ರಿಜಿ ಜಯಂತಿ ಭಾರತಾಂಬೆಯ ಹೆಮ್ಮೆ



ಸಿಹಿ ಕಹಿ ಸುದ್ದಿ,

ಅಕ್ಟೋಬರ್ 2 ರಂದು ಜನಿಸಿದ ವಿಶ್ವ ಮರೆಯದ ಮಹಾನ್ ನಾಯಕರು
ಸತ್ಯ ನಿತ್ಯ ಶ್ರೇಷ್ಠ ನಾಯಕ ಮಹಾತ್ಮಗಾಂಧಿಜಿ
ಸೌಮ್ಯ ಸ್ವಭಾವ ಪ್ರಾಮಾಣಿಕ ಸ್ವಾಭಿಮಾನಿ ಲಾಲ್ ಬಹಾದುರ್ ಶಾಸ್ತ್ರೀಜಿ
ಅಹಿಂಸಾ ಮಾರ್ಗದಿ ದೇಶ ಕಟ್ಟಿದ ವಿಶ್ವ ಭಾತೃತ್ವದ ಬಾಪೂಜಿ
ಕ್ರಿಯಾಶೀಲ "ಶ್ವೇತ ಕ್ರಾಂತಿ" ಹರಿಕಾರ ಶಾಸ್ತ್ರೀಜಿ
"ಸತ್ಯ ಮೇವ ಜಯತೆ ಸಾರಿದ ಸರ್ವೋತ್ಕೃಷ್ಟ ಮಹಾತ್ಮ ಗಾಂಧೀಜಿ
"ಜೈ ಜವಾನ್ ಜೈ ಕಿಸಾನ್" ವಿಶ್ವದಿ ನಿಜ ಸಾರಿದ ಶುದ್ಧತೆಯ ಪ್ರತಿಪಾದಕ ಶಾಸ್ತ್ರೀಜಿ
ಅಸ್ಪ್ರಶ್ಯತೆ ಬಡತನ ಅಜ್ಞಾನ ಹೊಗಲಾಡಿಸಲು ಪಣತೊಟ್ಟ ಧೀಮಂತ ನಾಯಕ ಮಹಾತ್ಮಾ ಗಾಂಧಿಜಿ
ದೇಶದ ಹಿತವೇ ನನ್ನ ಗುರಿ ವಿಶ್ವದಿ ಸಾರಿದ ಮುಗ್ಧತೆಯ ಮಹಾನ್ ದೇಶದ ರೂವಾರಿ ಶಾಸ್ತ್ರೀಜಿ
ಭಾರತಾಂಬೆ ಕಿರುತಿ ಸದಾ ವಿಶ್ವದಿ ಬೆಳಗುವ ಮಹಾನ್ ಚೇತನಗಳ ಜನಿಸಿದ ಅಮೃತ ಘಳಿಗೆ ಸರ್ವ ಜನಾಂಗದ ಹೃದಯ ಸಾಮ್ರಾಟರು
ವಿಶ್ವದಿ ಶುಭ ದಿನ ತರಲಿ ಶುಭಕರ
ಅನವರತ ಬೆಳಗುತಿರಲಿ ಮಹಾ ಚೇತನಗಳ ಸುವಿಚಾರ ಸುಕಾರ್ಯ ಸದಾ ಭಾರತೀಯರ ಹೃದಯ ಸಾಮ್ರಾಜ್ಯದಲ್ಲಿ ಅನವರತ ಮಹಾತ್ಮ ಗಾಂಧೀಜಿ ಶಾಸ್ತ್ರಿಜಿ ಅಮರರು ಜಗದಲಿ.

* * *



ಶ್ರೀದೇಶಂಸು
ಶ್ರೀ ಸುರೇಶ ಶಂಕ್ರೇಪ್ಪ ಅಂಗಡಿ
"ವಿಶ್ವ ಆರೋಗ್ಯ ಸಂಜೀವಿನಿ"
ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತರು
ಬಾಗಲಕೋಟೆ

## ಉದ್ಯೋಗಂ ಮಾನವ ಲಕ್ಷಣಂ: ಪ್ರಾಚಾರ್ಯ ಡಾ.ಅರುಣಕುಮಾರ ಗಾಳಿ

**ಬಾಗಲಕೋಟೆ :** ವಿದ್ಯಾರ್ಥಿಗಳಿಗೆ ವಿದ್ಯೆಯ ಜೊತೆಗೆ ಉದ್ಯೋಗ ಅವಕಾಶ ಕಲ್ಪಿಸುವಲ್ಲಿ ಬಾಗಲಕೋಟೆ ನವನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಬದ್ಧತೆಯೊಂದಿಗೆ ಕಾರ್ಯ ಮಾಡುತ್ತಿದೆ. ಇದರ ಸದುಪಯೋಗವನ್ನು ಪಡೆದುಕೊಂಡ ನೂರಾರು ವಿದ್ಯಾರ್ಥಿಗಳು ರಾಜ್ಯದ ಪ್ರತಿಷ್ಠಿತ ಕಂಪನಿಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಆಧುನಿಕ ಯುಗದಲ್ಲಿಂದು ಉದ್ಯೋಗಂ ಮಾನವ ಲಕ್ಷಣಂ ಆಗಿದೆ ಎಂದು ಪ್ರಾಚಾರ್ಯರಾದ ಡಾ.ಅರುಣಕುಮಾರ ಗಾಳಿ ಅವರು ಹೇಳಿದರು.




ಅವರು ಬೆಂಗಳೂರಿನ ಸ್ಪೆಟ್ರಮ್ ಟ್ಯಾಲೆಂಟ್ ಮ್ಯಾನೇಜಮೆಂಟ್ ಲಿಮಿಟೆಡ್ ಹಾಗೂ ಬಾಗಲಕೋಟೆ ನವನಗರದ ಸ.ಪ್ರ. ದ ಕಾಲೇಜಿನ ಐಕ್ಯೂಎಸಿ, ಉದ್ಯೋಗ ಕೋಶದ ಸಹಯೋಗದಲ್ಲಿ ಬುಧುವಾರ ಸ.ಪ್ರ.ದ ಕಾಲೇಜಿನ ಸಭಾ ಭವನದಲ್ಲಿ ನಡೆದ ಉದ್ಯೋಗ ಮೇಳದ ಅಧ್ಯಕ್ಷತೆ ವಹಿಸಿ ಮಾತನಾಡಿದರು ಉದ್ಯೋಗ ಮೇಳದಲ್ಲಿ ಪಾಲ್ಗೊಂಡ ವಿದ್ಯಾರ್ಥಿಗಳು ತಮ್ಮಲ್ಲಿರುವ ಪ್ರತಿಭೆ, ಕೌಶಲ್ಯ, ಶಿಸ್ತು ಹಾಗೂ ಬೌದ್ಧಿಕ ಸಾಮರ್ಥ್ಯ ಬಳಸಿಕೊಂಡು ಉದ್ಯೋಗವನ್ನು ಪಡೆದು ತಮ್ಮ ಬದುಕು ಸುಂದರವಾಗಿ ರೂಪಿಸಿಕೊಳ್ಳಬೇಕು. ಉದ್ಯೋಗ ಪಡೆದು ಸಮಾಜದಲ್ಲಿ ಆದರ್ಶ ವ್ಯಕ್ತಿಯಾಗಬೇಕೆಂದು ಹೇಳಿದರು.

ಬೆಂಗಳೂರಿನ ಸ್ಪೆಟ್ರಮ್ ಟ್ಯಾಲೆಂಟ್ ಮ್ಯಾನೇಜಮೆಂಟ್ ಲಿಮಿಟೆಡ್ ಇದರ ಮಾನವ ಸಂಪನ್ಮೂಲ ಅಧಿಕಾರಿಯಾದ ಪ್ರಭು ಅವರು ಮಾತನಾಡಿ ತಂತ್ರಜ್ಞಾನ ಯುಗದಲ್ಲಿರುವ ವಿವಿಧ ಕಂಪನಿಗಳಲ್ಲಿ ವಿದ್ಯಾರ್ಥಿಗಳ ಶೈಕ್ಷಣಿಕ ಅರ್ಹತೆಯ ಆಧಾರದಮೇಲೆಉದ್ಯೋಗಾವಕಾಶಗಳಿವೆ. ವಿದ್ಯಾರ್ಥಿಗಳು ತಮ್ಮ ಪರಿಶ್ರಮ ಮತ್ತು ಆಸಕ್ತಿಯಿಂದ ಉದ್ಯೋಗದಲ್ಲಿ ತೊಡಗಿಸಿಕೊಳ್ಳುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಕನ್ನಡ ವಿಭಾಗದ ಸಹ ಪ್ರಾಧ್ಯಾಪಕರಾದ ಡಾ.ಜಿ.ಜಿ. ಹಿರೇಮಠ ಅವರು ಮಾತನಾಡಿ, ವಿದ್ಯಾರ್ಥಿಗಳು ತಮ್ಮಲಿನ ಬೌದ್ಧಿಕ ಸಂಪತ್ತಿನಿಂದ ಉದ್ಯೋಗ ಪಡೆದು, ಮುಂದೆ ಉದ್ಯಮಿಯಾಗಿ ತಾನು ಇತರರಿಗೂ ಉದ್ಯೋಗ ನೀಡುವಂತಹ ವ್ಯಕ್ತಿಯಾಗಬೇಕು. ಉದ್ಯೋಗದಿಂದ ಸಮಾಜದಲ್ಲಿ ಸುಂದರ ಬದುಕು ಕಟ್ಟಿಕೊಳ್ಳಲು ಅನುಕೂಲವಾಗುತ್ತದೆ ಎಂದು ಹೇಳಿದರು.

ಕಾಲೇಜಿನ ಉದ್ಯೋಗ ಕೋಶದ ಅಧಿಕಾರಿ ಪ್ರೊ.ರಾಜೇಶ ಅವರು ಪ್ರಾಸ್ತಾವಿಕವಾಗಿ ಮಾತನಾಡಿ ನಮ್ಮ ಕಾಲೇಜಿನ ಉದ್ಯೋಗ ಕೋಶದ ಅಡಿಯಲ್ಲಿ ಪ್ರಾಚಾರ್ಯರಾದ ಡಾ.ಅರುಣಕುಮಾರಗಾಳಿಅವರಪರಿಶ್ರಮದ ಫಲವಾಗಿ ನೂರಾರು ವಿದ್ಯಾರ್ಥಿಗಳು ಪ್ರತಿ ವರ್ಷವೂ ವಿವಿಧ ಕಂಪನಿಗಳಲ್ಲಿ ಉದ್ಯೋಗವನ್ನು ಪಡೆಯುತ್ತಿರುವುದು ಹೆಮ್ಮೆಯ ವಿಷಯವಾಗಿದೆ ಎಂದರು. ಇನ್ನೊರ್ವ ಮಾನವ ಸಂಪನ್ಮೂಲ ಅಧಿಕಾರಿಯಾದ ಹರೀಶ್ ಅವರು ವೇದಿಕೆ ಮೇಲೆ ಉಪಸ್ಥಿತಿದ್ದರು.

ಪ್ರೊ.ಪರಸಪ್ಪ ತಳವಾರ ಪ್ರಾರ್ಥನೆ ಗೀತೆ ಹಾಡಿದರು, ಡಾ.ಚಂದ್ರಶೇಖರ ಕಾಳನ್ನವರ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು. ಬೆಂಗಳೂರಿನ ಸ್ಪೆಟ್ರಮ್ ಟ್ಯಾಲೆಂಟ್ ಮ್ಯಾನೇಜಮೆಂಟ್ ಲಿಮಿಟೆಡ್ ನಡೆಸಿದ ಉದ್ಯೋಗ ಮೇಳದಲ್ಲಿ ಒಟ್ಟು 350 ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಅದರಲ್ಲಿ 245 ವಿದ್ಯಾರ್ಥಿಗಳು ಆಯ್ಕೆಯಾಗಿ ನೇಮಕಾತಿ ಆದೇಶ ಪಡೆದಿದ್ದಾರೆ.

ಪೋಟೋ : ನವನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ 2024 ರ ಉದ್ಯೋಗ ಮೇಳದಲ್ಲಿ ಪ್ರಾಂಶುಪಾಲರಾದ ಡಾ.ಅರುಣಕುಮಾರ ಗಾಳಿ, ಮಾನವ ಸಂಪನ್ಮೂಲ ಅಧಿಕಾರಿ ಪ್ರಭು, ಸಹ ಪ್ರಾಧ್ಯಾಪಕರಾದ ಡಾ.ಜಿ.ಜಿ.ಹಿರೇಮಠ, ಪ್ರೊ.ರಾಜೇಶ, ಹರೀಶ್ ಉಪಸ್ಥಿತರಿದ್ದರು.

## ರಾಂಪೂರಿನಲ್ಲಿ ಬಿಜೆಪಿ ಮಹಾಸದಸ್ಯತಾ ಅಭಿಯಾನಕ್ಕೆ ಚಾಲನೆ

### ದೇಶದ ಅಭಿವೃದ್ದಿಗೋಷ್ಕರ ಬಿಜೆಪಿ ಪಕ್ಷದ ಸದಸ್ಯತಾ ಅಭಿಯಾನ: ಗದ್ದಿಗೌಡರ




**ಬಾಗಲಕೋಟೆ :** ದೇಶದ ಹಿತದೃಷ್ಟಿಯಿಂದ ಬಿಜೆಪಿ ಸದಸ್ಯತಾ ಅಭಿಯಾನ ಕೈಗೊಂಡಿದ್ದು ದೇಶದ ಸಮಗ್ರ ಅಭಿವೃದ್ಧಿಗೆ ಬಿಜೆಪಿ ಸದಸ್ಯತ್ವ ಮೂಲಕ ಎಲ್ಲರೂ ಕೈ ಜೋಡಿಸಬೇಕಿದೆ ಎಂದು ಸಂಸದರಾದ ಪಿ.ಸಿ.ಗದ್ದಿಗೌಡರ ಹೇಳಿದರು.

ಅವರು ಬುಧವಾರ ರಾಂಪೂರ ಗ್ರಾಮದಲ್ಲಿ ಭಾರತೀಯ ಜನತಾ ಪಾರ್ಟಿಯ ಗ್ರಾಮೀಣ ಮಂಡಲದಿಂದ ಹಮ್ಮಿಕೊಂಡ ಮಹಾಸದಸ್ಯತಾ ಅಭಿಯಾನಕ್ಕೆ ಚಾಲನೆ ನೀಡಿಮಾತನಾಡಿದರು.

ಗ್ರಾಮ ಪಂಚಾಯಿತಿಯಿಂದ ಹಿಡಿದು ರಾಜ್ಯ ಹಾಗೂ ದೇಶದಲ್ಲಿ ಬಿಜೆಪಿ ಪಕ್ಷ ಅಧಿಕಾರದಲ್ಲಿದ್ದರೆ ಅಭಿವೃದ್ಧಿಗೆ ಸಹಕಾರಿಯಾಗುತ್ತದೆ, ಆ ದೃಷ್ಟಿಯಲ್ಲಿ ದೇಶದ ಬಿಜೆಪಿ ಪಕ್ಷ ದೇಶದ ಹಿತವನ್ನು ಕಾಪಾಡುತ್ತಾ ಬಂದಿದೆ, ದೇಶ ಹಿತಕ್ಕಾಗಿ ಬಿಜೆಪಿ ಮೊತ್ತಮ್ಮೆ ಮಹಾಸದಸ್ಯತ್ವಾ ಅಭಿಯಾನ ಹಮ್ಮಿಕೊಂಡಿದ್ದು ಗ್ರಾಮೀಣ ಹಾಗೂ ನಗರ ಕಾರ್ಯಕರ್ತರು ಈ ಸದಸ್ಯತ್ವಅಭಿಯಾನವನ್ನು ಯಶಸ್ವಿಗೊಳಿಸುವ್ವಂತೆ ಸಲಹೆ ನೀಡಿದರು.

ಮಾಜಿ ಶಾಸಕರಾದ ಡಾ.ವೀರಣ್ಣ ಚರಂತಿಮಠ ಅವರು ಮಾತನಾಡಿ ನಮ್ಮ ಮತಕ್ಷೇತ್ರದಲ್ಲಿ ಬಿಜೆಪಿ ಸರಕಾರದ ಅವಧಿಯಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸಗಳು ಆಗಿರುವುದು ನಿಮ್ಮೆಲ್ಲರ ಕಣ್ಣಮುಂದೆ ಇದೆ. ಸದ್ಯ ರಾಜ್ಯದಲ್ಲಿ ಕಾಂಗ್ರೆಸ್ಸ ಸರಕಾರ ಬಂದು 2ವರ್ಷಗಳಾದರು ಕ್ಷೇತ್ರದಲ್ಲಿ ಒಂದೇ ಒಂದು ಅಭಿವೃದ್ಧಿ ಕಾಯಕ್ರಮಗಳು ನಡಿತಾ ಇಲ್ಲಾ, ಇದನ್ನು ಜನರು ಅರ್ಥ ಮಾಡಿಕೊಳ್ಳಬೇಕು ಎಂದ ಅವರು ಪಂಡಿತ ದೀನದಯಾಳ ಉಪಾಧ್ಯಯರು ಹಾಕಿ ಕೊಟ್ಟಮಾರ್ಗದಲ್ಲಿ ಇಂದು ಬಿಜೆಪಿ ಪಕ್ಷ ನಡೆಯುತ್ತಿದೆ ಎಂದರು.


ಪ್ರಾಸ್ತಾವಿಕ ಮಾತನಾಡಿದ ಗ್ರಾಮೀಣ ಮಂಡಲ ಅಧ್ಯಕ್ಷ ಸುರೇಶ ಕೊಣ್ಣೂರ ಸದಸ್ಯತಾ ಅಭಿಯಾನದ ಗುರಿ ಹಾಗೂ ಅದರ ಬಗ್ಗೆ ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ರಾಜು ಮುದೇನೂರ, ಮಲ್ಲೇಶ ವಿಜಾಪುರ, ಕಲ್ಲಪ್ಪ ಭಗವತಿ, ಸೋಮಸಿಂಗ್ ಲಮಾಣಿ, ಸಿದ್ದು ಲೋಕಾಪುರ, ಗುಳಪ್ಪದೋಣಿ, ದೀಲಿಪಕುಮಾರ ಚವ್ಹಾಣ, ಅಮ್ಯತೆಗೌಡರ,

ಕರಿಯಪ್ಪ ಕಟ್ಟಿಮನಿ, ವಾಯ್.ಡಿ.ಆಲೂರ, ಹುಲ್ಲನಗೌಡ ಗೌಡರ, ಪಾರ್ವತಿ ಹುಗ್ಗಿ, ಶ್ಯಾಮಲಾ ಹಳ್ಳೂರ, ದ್ರಾಕ್ಷಾಯಣಿ ಮಂಕಣಿ, ಚಂದ್ರಬಾಗ ಮಾಂಡ್ರೆ, ಶಶಿಕಲಾ ಜೋಳದ, ಶಂಕ್ರವ್ವ ಕುಂಬಾರ, ಸೇರಿದಂತೆ ಅನೇಕರು ಇದ್ದರು.

## ಹಾನಗಲ್ಲ ಶ್ರೀ ಕುಮಾರೇಶ್ವರ ಆಸ್ಪತ್ರೆಯಲ್ಲಿ ತಂಬಾಕು ವ್ಯಸನ ಮುಕ್ತ ಕೇಂದ್ರ ಸ್ಥಾಪನೆ

**ಬಾಗಲಕೋಟೆ :** ನಗರದ ಬಿ.ವಿ.ವಿ.ಸಂಘದ ಎಸ್. ನಿಜಲಿಂಗಪ್ಪ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಹಾನಗಲ್ಲ ಶ್ರೀ ಕುಮಾರೇಶ್ವರ ಆಸ್ಪತ್ರೆಯ ಹೊರರೋಗಿಗಳ ವಿಭಾಗದಲ್ಲಿ 'ತಂಬಾಕು ವ್ಯಸನ ಮುಕ್ತ ಕೇಂದ್ರ' ವನ್ನು ಕೇಂದ್ರ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ನಿರ್ದೇಶನದಂತೆ ಸ್ಥಾಪಿಸಿ ಉದ್ಘಾಟಿಸಲಾಯಿತು.




ತಂಬಾಕು ಸೇವನೆಯನ್ನು ತಡೆಗಟ್ಟಲು ಮತ್ತು ಸಾರ್ವಜನಿಕ ಆರೋಗ್ಯವನ್ನು ಉತ್ತೇಜಿಸಲು ರಾಷ್ಟ್ರದಾದ್ಯಂತ ವೈದ್ಯಕೀಯ ಸಂಸ್ಥೆಗಳಲ್ಲಿ ತಂಬಾಕು ವ್ಯಸನ ಮುಕ್ತ ಕೇಂದ್ರಗಳನ್ನು ಸ್ಥಾಪಿಸಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ದೆಹಲಿಯಲ್ಲಿ ಅಧೀಕೃತವಾಗಿ ಶ್ರೀ. ಜೆ.ಪಿ. ನಡ್ಡಾ, ಕೇಂದ್ರ ಸಚಿವರು, ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ದೆಹಲಿ, ಅವರು ಉದ್ಘಾಟಿಸಿದರು. ಅದೇ ಸಮಯಕ್ಕೆ ಕೇಂದ್ರ ಸರ್ಕಾರದ ನಿರ್ದೇಶನದಂತೆ ಎಲ್ಲ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ರಾಷ್ಟ್ರದಾದ್ಯಂತ ಎಲ್ಲ ಕೇಂದ್ರಗಳು ಉದ್ಘಾಟನೆಯಾದಂತೆ, ಬಾಗಲಕೋಟೆಯ ಬಿವಿವಿ ಸಂಘದ ಎಸ್. ನಿಜಲಿಂಗಪ್ಪ ವೈದ್ಯಕೀಯಮಹಾವಿದ್ಯಾಲಯದಹಾನಗಲ್ಲ ಶ್ರೀ ಕುಮಾರೇಶ್ವರ ಆಸ್ಪತ್ರೆಯಲ್ಲಿಯೂ ಈ ಕೇಂದ್ರವನ್ನು ಉದ್ಘಾಟಿಸಲಾಯಿತು.

ವಿಶ್ವಾದ್ಯಂತ ಸುಮಾರು 33% ಕ್ಯಾನ್ಸರ್ ಸಂಬಂಧಿತ ಸಾವುಗಳಿಗೆ ತಂಬಾಕು ಬಳಕೆಯೇ ಮುಖ್ಯ ಕಾರಣವಾಗಿದೆ. ಭಾರತದಲ್ಲಿ, 2020 ರಲ್ಲಿ, ತಂಬಾಕು-ಸಂಬಂಧಿತ ಕ್ಯಾನ್ಸರ್‌ಗಳು ರಾಷ್ಟ್ರದ ಕ್ಯಾನ್ಸರ್‌ನ ಒಟ್ಟಾರೆ ಅಂಕಿ ಅಂಶಗಳಿಗೆ ಶೇಕಡಾ 27 ರಷ್ಟು ಕೊಡುಗೆ ನೀಡಿದೆ. ಘಊಔ ಪ್ರಕಾರ, 2030 ರ ವೇಳೆಗೆ ವರ್ಷಕ್ಕೆ 8 ಮಿಲಿಯನ್‌ಗಿಂತಲೂ ಹೆಚ್ಚು ತಂಬಾಕು ಸಂಬಂಧಿತ ಸಾವುಗಳು ಸಂಭವಿಸುತ್ತವೆ, ಜಾಗತಿಕ ವಯಸ್ಕರ ತಂಬಾಕು ಸಮೀಕ್ಷೆ (ಉಂಖಿಖ 2) ಪ್ರಕಾರ, ಭಾರತದಲ್ಲಿ 15 ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನ ಶೇಕಡಾ 28.6 (266.8 ಮಿಲಿಯನ್) ವಯಸ್ಕರು ಬೇರೆ ಬೇರೆ ರೂಪದಲ್ಲಿ ತಂಬಾಕನ್ನು ಬಳಸುತ್ತಾರೆ.

ಆದ್ದರಿಂದ ತಂಬಾಕು ಸೇವನೆಯ ದುಷ್ಪರಿಣಾಮಗಳನ್ನು ಎದುರಿಸಲು ಮತ್ತು ಸಾರ್ವಜನಿಕ ಆರೋಗ್ಯವನ್ನು ಉತ್ತೇಜಿಸಲು 'ತಂಬಾಕು ವ್ಯಸನ ಮುಕ್ತ ಕೇಂದ್ರ'ಗಳನ್ನು ಸ್ಥಾಪಿಸಲು ರಾಷ್ಟ್ರೀಯ ವೈದ್ಯಕೀಯ ಆಯೋಗವು (ಓಒಅ) ದೇಶಾದ್ಯಂತ ವೈದ್ಯಕೀಯ ಕಾಲೇಜುಗಳಿಗೆ ನೀಡಿದ ನಿರ್ದೇಶನದಂತೆ ನಮ್ಮ ಆಸ್ಪತ್ರೆಯಲ್ಲಿಯೂ ಸ್ಥಾಪಿಸಲಾಗಿದೆ.

ಎಸ್.ನಿಜಲಿಂಗಪ್ಪ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ.ಭುವನೇಶ್ವರಿ ಸಿ. ಯಳಮಲಿ ಯವರು ಈ ಕೇಂದ್ರವನ್ನು ಉದ್ಘಾಟಿಸಿ, 'ಬಿ.ವ್ಹಿ.ವ್ಹಿ ಸಂಘದ ಕಾರ್ಯಾಧ್ಯಕ್ಷರಾದ ಡಾ.ವೀರಣ್ಣ ಸಿ.ಚರಂತಿಮಠರವರುಹಾಗೂವೈದ್ಯಕೀಯ ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷರಾದ ಶ್ರೀ.ಅಶೋಕ ಎಮ್. ಸಜ್ಜನ (ಬೇವೂರ) ರವರು ಈ ತಂಬಾಕು ವ್ಯಸನ ಮುಕ್ತ ಕೇಂದ್ರವನ್ನು ಸ್ಥಾಪಿಸಲು ಅನುಮತಿ ನೀಡುವುದರ ಮೂಲಕ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಅವರ ಈ ಪ್ರಯತ್ನ ಪ್ರಶಂಸನೀಯವಾಗಿದೆ.

ತಂಬಾಕು ಅವಲಂಬನೆಯು ಅತ್ಯಂತ ಗಂಭೀರವಾದ ಸಾರ್ವಜನಿಕ ಆರೋಗ್ಯದ ಅಪಾಯಗಳಲ್ಲಿ ಒಂದಾಗಿದೆ, ಇದು ಕ್ಯಾನ್ಸರ್ ಅನ್ನು ಮೀರಿದ ಪರಿಣಾಮಗಳೊಂದಿಗೆ, ಹೃದಯ, ಶ್ವಾಸಕೋಶಗಳು, ಮೂತ್ರಪಿಂಡಗಳುಮತ್ತುಇತರಅಂಗಗಳನ್ನು ತೀವ್ರವಾಗಿ ದುರ್ಬಲಗೊಳಿಸುವಂತಹ ಕಾಯಿಲೆಗಳನ್ನು ಉಂಟುಮಾಡುತ್ತದೆ' ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ವೈದ್ಯಕೀಯ ಅಧೀಕ್ಷಕರಾದ ಡಾ. ಶ್ರೀರಾಮ ಕೋರಾ, ಮಾನಸಿಕರೋಗ ವಿಭಾಗದ ಮುಖ್ಯಸ್ಥರಾದ ಡಾ. ನಾರಾಯಣ ಮುತಾಲಿಕ, ನೋಡಲ್ ಆಫೀಸರ್‌ರಾದ ಡಾ. ವಿನೋದ ಅಕ್ಕಸಾಲಿ, 'ತಂಬಾಕು ವ್ಯಸನ ಮುಕ್ತ ಕೇಂದ್ರ'ದ ಮೇಲ್ವಿಚಾರಕರಾದ ಡಾ.ಅಶೋಕ ಡೋರ್ಲೆ ಹಾಗೂ ವೈದ್ಯಕೀಯ ಮಹಾವಿದ್ಯಾಲಯದ ವಿವಿಧ ವಿಭಾಗಗಳ ಮುಖ್ಯಸ್ಥರು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

## ಪಂಡಿತ ದೀನದಯಾಳ ಉಪಾಧ್ಯಯರ ಜನ್ಮದಿನಾಚರಣೆ



**ಬಾಗಲಕೋಟೆ:** ನಗರದವಿಧಾನಪರಿಷತ್‌ಶಾಸಕರಾದ ಶ್ರೀ ಪಿಎಚ್ ಪೂಜಾರ್ ಇವರ ಜನಸಂಪರ್ಕ ಕಾರ್ಯಾಲಯದಲ್ಲಿ ಇಂದು ಪಂಡಿತ್ ದೀನ್ ದಯಾಳ್ ಉಪಾಧ್ಯಾಯ 108ನೇ ಜನ್ಮದಿನವನ್ನು ಆಚರಿಸಲಾಯಿತು.

ಈ ಸಂದರ್ಭದಲ್ಲಿ ವಿರುಪಾಕ್ಷ ಅಮೃತಕರ, ಶಂಭುಗೌಡ ಪಾಟೀಲ, ಅಪ್ಪಣ್ಣ ಪೂಜಾರ, ಚಂದ್ರಕಾಂತ ಕೇಸನೂರ, ಕುಮಾರ ಗಿರಿಜಾ, ರಾಜು ಚಿತ್ತವಾಡಗಿ ,ಸಂಗಣ್ಣಗೌಡ ಗೌಡರ, ಮಲ್ಲಿಕಾರ್ಜುನ ಸುರಪೂರ,ಶೈಲು ಅಂಗಡಿ,ರಾಜು ಗೌಳಿ, ಡಾಕ್ಟರ್ ಸುಧೀರ್ ಜಾಧವ್ ಡಾಕ್ಟರ್ ಕೃಷ್ಣ ಚೌದರಿ ಶಾಂತಾಬಾಯಿ ಗೋಣಿ, ವಿಜಯಲಕ್ಷ್ಮೀ ಅಂಗಡಿ, ಮಂಜುನಾಥ ಬಳ್ಳೂರ, ಭೀಮನಗೌಡ ಪಾಟೀಲ, ಯಮನಪ್ಪ ಹೂಗಾರ, ಮಲ್ಲಪ್ಪ ಯಂಡಿಗೇರಿ, ರಂಗಣ್ಣಗೌಡ ಗೌಡರ , ಮಲ್ಲಪ್ಪ ಕಟಗೇರಿ , ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

# ಮಹಾಲಿಂಗಪುರ ಪುರಸಭೆ ಅಧ್ಯಕ್ಷರ ಜಾನುವಾರು ಪ್ರೀತಿ

## ದಾಖಲೆಯ 36 ಲಕ್ಷಕ್ಕೆ ತೆರಬಂಡಿ ಸ್ಪರ್ಧೆಯ ಜೋಡೆತ್ತು ಖರೀದಿಸಿದ ಯಲ್ಲನಗೌಡ ಪಾಟೀಲ

* ಚಂದ್ರಶೇಖರ ಮೋರೆ.

**ಮಹಾಲಿಂಗಪುರ :** ಉತ್ತರ ಕರ್ನಾಟಕದ ರೈತರ ಗ್ರಾಮೀಣ ಕ್ರೀಡೆಗಳಾದ ತೆರೆಬಂಡಿ, ಕಲ್ಲು ಜಗ್ಗುವ ಸ್ಪರ್ಧೆಯಲ್ಲಿ ಪ್ರಥಮ ಮತ್ತು ದ್ವಿತೀಯ ಬಹುಮಾನ ಪಡೆಯುತ್ತಾ ಉತ್ತರ ಕರ್ನಾಟಕದ ರೈತರ ಮನೆಮಾತಾಗಿರುವ ಮುಧೋಳ ತಾಲೂಕಿನ ಅಕ್ಕಿಮರಡಿ ಗ್ರಾಮದ ಮಲ್ಲಪ್ಪ ಬೋರಡ್ಡಿ ಅವರ ತೆರೆಬಂಡಿ ಸ್ಪರ್ಧೆಯ ಜೋಡೆತ್ತುಗಳನ್ನು ಮಹಾಲಿಂಗಪುರ ಪುರಸಭೆಯ ಅಧ್ಯಕ್ಷರು, ಪ್ರಗತಿಪರ

ರೈತರಾದ ಯಲ್ಲನಗೌಡ ಪಾಟೀಲ ಅವರು ದಾಖಲೆಯ 36 ಲಕ್ಷರೂ ಗಳಿಗೆ ಖರೀದಿಸಿದ್ದು ಬಹುಶ: ಕರ್ನಾಟಕ ರಾಜ್ಯದಲ್ಲಿಯೇ ಪ್ರಥಮ ಬಹುದೊಡ್ಡ ದಾಖಲೆ ಎನ್ನಬಹುದು. ಇಷ್ಟು ಹಣದಲ್ಲಿ 4 ಟ್ರ್ಯಾಕ್ಟರ್‌ಗಳನ್ನು ಖರೀದಿಸಬಹುದಾಗಿದೆ. ಆದರೆ ರೈತರ ಜಾನುವಾರು ಪ್ರೀತಿಯ ಮುಂದೆ ಎಲ್ಲವೂ ಗೌಣ.

**ತಂದೆಯ ಪ್ರೇರಣೆಯಲ್ಲಿ ಜಾನುವಾರು ಪ್ರೀತಿ:** ದಿ.ಬಸಲಿಂಗಪ್ಪ ಪಾಟೀಲ ಪಾಟೀಲ ಅವರು ಪಟ್ಟಣದ ಪ್ರಗತಿಪರ ರೈತರಾಗಿದ್ದು. ಅವರು ಸಹ ಎತ್ತುಗಳನ್ನು ಸಾಕುವದು, ಬಸವೇಶ್ವರ ಜಾನುವಾರು ಜಾತ್ರೆಗಳಲ್ಲಿ ಗಳೆ ಹೊಡೆಯುವದು,
ಕಲ್ಲು ಎಗ್ಗುವದು, ತೆರೆಬಂಡಿ ಸ್ಪರ್ಧೆ ಸೇರಿದಂತೆ ವಿವಿಧ ಸ್ಪರ್ಧೆಗಳಿಗಾಗಿ ಹತ್ತಾರು ವರ್ಷಗಳ ಕಾಲ ತಮ್ಮನ್ನು ತೊಡಗಿಸಿಕೊಂಡಿದ್ದರು. ತಂದೆ ಬಸಲಿಂಗಪ್ಪಗೌಡ ಪ್ರೇರಣೆಯಲ್ಲಿ ಬೆಳೆದ
ಯಲ್ಲನಗೌಡ ಪಾಟೀಲ ಮತ್ತು ಕೃಷ್ಣಗೌಡ ಪಾಟೀಲ ಸಹೋದರರು ಕಳೆದ 30 ವರ್ಷಗಳಿಂದ ಜಾನುವಾರು ಪ್ರೀಯರಾಗಿ ಸ್ಪರ್ಧೆಯ ಎತ್ತುಗಳನ್ನು ಸಾಕುವದು, ಸುತ್ತಮುತ್ತಲಿನ 2–3 ಜಿಲ್ಲೆಗಳಲ್ಲಿ ನಡೆಯುವ ಜಾನುವಾರು ಸ್ಪರ್ಧೆಗಳ್ಲಿ ತಮ್ಮ ಎತ್ತುಗಳೊಂದಿಗೆ ಭಾಗವಹಿಸಿ ಬಹುಮಾನ ಗೆಲ್ಲುವದು ಇವರ ಜಾನುವಾರು ಪ್ರೀತಿ ಮತ್ತು ಹುಚ್ಚು ಹವ್ಯಾಸಕ್ಕೆ ಸಾಕ್ಷೀ.

**ಎತ್ತುಗಳ ಖರೀದಿಗಾಗಿ ಲಕ್ಷಾಂತರ ವೆಚ್ಚ :** ಪುರಸಭೆಯ ನೂತನ ಅಧ್ಯಕ್ಷರು, ರೈತರಾದ ಯಲ್ಲನಗೌಡ ಪಾಟೀಲ ಅವರು ಪಟ್ಟಣದ ಬಸವೇಶ್ವರ ಜಾತ್ರಾ ಕಮಿಟಿ ಅಧ್ಯಕ್ಷರಾಗಿ ತೆರೆಬಂಡಿ, ಕಲ್ಲು ಎಳೆಯುವದು, ಗಳೆ ಹೊಡೆಯುವ ರಾಜ್ಯಮಟ್ಟದ ಸ್ಪರ್ಧೆಗಳನ್ನು ಸಂಘಟಿಸಿದವರು.

ಸ್ವತಹ: ಸ್ಪರ್ಧೆಗಾಗಿ ಲಕ್ಷಾಂತರ ಮೌಲ್ಯದ ಎತ್ತುಗಳನ್ನು ಸಾಕಿ ಸ್ಪರ್ಧೆಯಲ್ಲಿ ಭಾಗವಹಿಸಿ ಸಾಕಷ್ಟು ಬಹುಮಾನ ಗೆದ್ದಿದ್ದಾರೆ. ಕಳೆದ 4 ವರ್ಷಗಳ ಹಿಂದೆ 8.1 ಲಕ್ಷ ಕೊಟ್ಟು ದಾಸನಾಳದ ರೈತರಿಂದ ರಾಜಾ ಹೆಸರಿನ ಎತ್ತನ್ನು ಖರೀದಿಸಿದ್ದರು. ಆ ಎತ್ತು ಮೂರು ವರ್ಷಗಳಲ್ಲಿ ಸಾಕಷ್ಟು ಬಹುಮಾನ ತಂದುಕೊಟ್ಟು ಕಳೆದ ವರ್ಷದ ಅಗಷ್ಟ್‌ನಲ್ಲಿ ಅಕಾಲಿಕವಾಗಿ ಅಸುನೀಗಿದ್ದನ್ನು ಸ್ಮರಿಸಬಹುದು.




### ಜಾನುವಾರು ಪ್ರೀತಿಯ ಹುಚ್ಚು ಬಿಡುತ್ತಿಲ್ಲ

ನಮ್ಮ ತಂದೆಯ ಕಾಲದಿಂದಲೂ ನಮ್ಮ ಮನೆಯಲ್ಲಿ ಎತ್ತುಗಳನ್ನು ಸಾಕುವದು, ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸುವದು ನಮ್ಮ ಮನೆತನದ ಪ್ರಮುಖ ಹವ್ಯಾಸ. ಕಲ್ಲು ಜ್ಗುವದು, ಗಳೆ ಹೊಡೆಯುವದು, ಇತ್ತಿಚಿನ ತೆರಬಂಡಿ ಸ್ಪರ್ಧೆಗಳಲ್ಲಿ ಭಾಗವಹಿಸುವ ಎತ್ತುಗಳ ಮೇಲಿನ ಹುಚ್ಚು ಪ್ರೀತಿಯು ಇಂದಿಗೂ ಬಿಟ್ಟಿಲ್ಲ. ಕಳೆದ 3–4 ವರ್ಷಗಳ್ಳಿ ತೆರಬಂಡಿ ಸ್ಪರ್ಧೆಯಲ್ಲಿ ದಾಖಲೆ ನಿರ್ಮಿಸಿರುವ ನೆರೆಯ ಅಕ್ಕಿಮರಡಿ ಗ್ರಾಮದ ಮಲ್ಲಪ್ಪ ಬೋರಡ್ಡಿ ಅವರ ಎತ್ತುಗಳನ್ನು ಇಂದು ಬರೋಬ್ಬರಿ 36 ಲಕ್ಷ ಹಣವನ್ನು ನೀಡಿ ಖರೀದಿಸಿದ್ದೇವೆ. ನಮ್ಮ ಜಾನುವಾರುಗಳ ಪ್ರೀತಿಗೆ ಸಹೋದರರಾದ ಕೃಷ್ಣಗೌಡ, ವಿಠ್ಠಲಗೌಡ, ನಾರಾಯಣಗೌಡ ಅವರು ಸಹಕಾರ ನೀಡುತ್ತಿದ್ದಾರೆ. ಕಳೆದ 25 ವರ್ಷಗಳಿಂದ ರಾಜಕೀಯ ಜೀವನದಲ್ಲಿದ್ದರೂ ಸಹ ಜಾನುವಾರುಗಳ ಮೇಲಿನ ಅಭಿಮಾನ, ಹುಚ್ಚುಪ್ರೀತಿ ಕಡಿಮೆಯಾಗಿಲ್ಲ. ಈ ಜೋಡೆತ್ತುಗಳು ತೆರಬಂಡಿ ಸ್ಪರ್ಧೆಗೆ ಹೇಳಿ ಮಾಡಿಸಿದ ಜೋಡೆತ್ತುಗಳಾದ ಕಾರಣ ಹೆಚ್ಚಿನ ಹಣ ನೀಡಿ ಖರೀದಿಸಿದ್ದೇವೆ ಎಂಬ ಹೆಮ್ಮ ನಮಗಿದೆ.

। ಯಲ್ಲನಗೌಡ ಪಾಟೀಲ

**36 ಲಕ್ಷಕ್ಕೆ ಜೋಡೆತ್ತು ಖರೀದಿಸಿದ ಮಹಾಲಿಂಗಪುರ ಪುರಸಭೆ ಅಧ್ಯಕ್ಷರು.**

**ಬಹುಮಾನ ಮತ್ತು ಮಾರಾಟದಲ್ಲಿ ದಾಖಲೆಯ ಹೆಮ್ಮೆ:** ಕಳೆದ 4–5 ವರ್ಷಗಳ ಹಿಂದೆಒಂದುಎತ್ತಿಗೆ16ಲಕ್ಷಹಾಗೂಇನ್ನೊಂದು ಎತ್ತಿಗೆ12.80ಲಕ್ಷಹಣಕೊಟ್ಟುಖರೀದಿಸಿದ್ದೇವು. ಎರಡು ಎತ್ತುಗಳನ್ನು ಬೇರೆ ಬೇರೆ ಭಾಗಗಳಿಂದ ಖರೀದಿಸಿ ತಂದು ಸ್ಪರ್ಧೆಗಾಗಿ ಜೋಡಿ ಮಾಡಿದ್ದೇವು. ಒಟ್ಟು 28.80 ಲಕ್ಷಕ್ಕೆ ಖರೀದಿಸಿದ ಎತ್ತುಗಳು ಕಳೆದ 4–5 ವರ್ಷಗಳಲ್ಲಿ ಉತ್ತರ ಕರ್ನಾಟಕದ 4–5 ಜಿಲ್ಲೆಗಳಲ್ಲಿ ನಡೆದ ತೆರಬಂಡಿ ಸ್ಪರ್ಧೆಯಲ್ಲಿ ಶೇ.90% ಪ್ರಥಮ ಮತ್ತು ದ್ವೀತಿಯ ಸ್ಥಾನಗಳಿಸಿ ನಾವು ಹಾಕಿದ ಹಣಕ್ಕೆ ಮೂರು ಪಟ್ಟು ಲಾಭವನ್ನು ತಂದುಕೊಟ್ಟಿವೆ. ತೆರಬಂಡಿ ಸ್ಪರ್ಧೆಯಲ್ಲಿ ಅತಿಹೆಚ್ಚು ಪ್ರಥಮ ಬಹುಮಾನ ಹಾಗೂ ಇಂದು ದಾಖಲೆಯ 36 ಲಕ್ಷಕ್ಕೆ ಜೋಡೆತ್ತು ಮಾರಾಟವಾಗಿದ್ದು ಕರ್ನಾಟಕ ರಾಜ್ಯದಲ್ಲಿ ನಮ್ಮ ಅಕ್ಕಿಮರಡಿ ಎತ್ತುಗಳೇ ಮೊದಲಿರಬಹುದು. ನಮ್ಮ ಹಾಗೆ ಎತ್ತುಗಳ ಮೇಲೆ ಅಪಾರ ಪ್ರೀತಿ, ಅಭಿಮಾನ ಮತ್ತು ತೆರಬಂಡಿ ಸ್ಪರ್ಧೆಯನ್ನು ನಡೆಸುವಂತಹ ಮಹಾಲಿಂಗಪುರ ಪುರಸಭೆಯ ಅಧ್ಯಕ್ಷರು, ಪ್ರಗತಿಪರ ರೈತರಾದ ಯಲ್ಲನಗೌಡ ಪಾಟೀಲ ಅವರು ದಾಖಲೆಯ 36 ಲಕ್ಷಕ್ಕೆ ನಮ್ಮ ಜೋಡೆತ್ತುಗಳನ್ನು ಖರೀದಿಸಿದ್ದು ನಮಗೆ ಬಹಳ ಖುಷಿಯ ಸಂಗತಿ.

। ಮಲ್ಲಪ್ಪ ಬೋರಡ್ಡಿ **ದಾಖಲೆಯ 36 ಲಕ್ಷಕ್ಕೆ ಎತ್ತುಗಳನ್ನು ಮಾರಾಟ ಮಾಡಿದ ಅಕ್ಕಿಮರಡಿ ಗ್ರಾಮದ ಪ್ರಗತಿಪರ ರೈತರು.**

# ಬೇವೂರ ಗ್ರಾಮದಲ್ಲಿ ಲಾರ್ವಾ ಸಮೀಕ್ಷೆ

**ಬಾಗಲಕೋಟೆ :** ಡೆಂಗ್ಯೂ ಜ್ವರ ಹರಡುತ್ತಿರುವ ಕಾರಣ ನಗರದ ಬಸವೇಶ್ವರ ಸಮುದಾಯ ಆರೋಗ್ಯ ಶುಶ್ರೂಷ ವಿಭಾಗದ ವಿದ್ಯಾರ್ಥಿಗಳು ತಾಲೂಕಿನ ಬೇವೂರ ಗ್ರಾಮದ ವಿವಿಧ ವಾರ್ಡಗಳಲ್ಲಿ ಮಂಗಳವಾರ ಲಾರ್ವಾ ಸಮೀಕ್ಷೆ ನಡೆಸಿದರು. ಮಹಾವಿದ್ಯಾಲಯದ ಪ್ರಾಚಾರ್ಯರಾದ ಪ್ರೋ. ಜಯಶ್ರೀ ಇಟ್ಟಿಯವರ ನಿರ್ದೇಶನದಂತೆ ಉಪನ್ಯಾಸಕಿ ಲಕ್ಷ್ಮೀ ಗೊಂದಿ ನೇತೃತ್ವದಲ್ಲಿ ಮನೆ ಮನೆಗೆ ತೆರಳಿ ಲಾರ್ವಾ ಸಮೀಕ್ಷೆ ನಡೆಸಿದರು. ಮುಂಗಾರು ಮಳೆಯ ಆರಂಭಗೊಂಡ ಹಿನ್ನೆಲೆ ಮನೆಯ ಸುತ್ತಮುತ್ತಲು ಮಳೆ ನೀರು ನಿಂತು ಸೊಳ್ಳೆಗಳು ಲಾರ್ವಾ ಇಡುವುದರ ಮೂಲಕ ಸಂತಾನೋತ್ಪತ್ತಿ ಮಾಡುತ್ತದೆ. ಇವುಗಳಿಂದ ಡೆಂಗ್ಯೂ, ಚಿಕನ್ ಗುನ್ಯಾ, ಮಲೇರಿಯಾ ರೋಗಗಳು ಹರಡಲು ಕಾರಣವಾಗುತ್ತದೆ. ನಾಗರಿಕರು ತಮ್ಮ ಮನೆಗಳ ಸುತ್ತ ಸ್ವಚ್ಛತೆ ಕಾಪಾಡಿಕೊಳ್ಳಬೇಕು. ಎಲ್ಲಿಯೂ ನೀರು ನಿಲ್ಲದಂತೆ ಎಚ್ಚರ ವಹಿಸಬೇಕು. ಬಳಸಿ ಎಸೆದ ಎಳನೀರು ಚಿಪ್ಪು, ಹಳೆಯ ಟೈಯರ್, ಪ್ಲಾಸ್ಟಿಕ್ ತ್ಯಾಜ್ಯ, ಮುಂತಾದ ವಸ್ತುಗಳನ್ನು ವಿಲೇವಾರಿ ಮಾಡಬೇಕು. ತೀವ್ರ ಜ್ವರ, ತಲೆನೋವು, ಕಣ್ಣು, ಮೈಕೈ ನೋವು ಕಂಡು ಬಂದಲ್ಲಿ ಹತ್ತಿರದ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ ಪರೀಕ್ಷಿಸಿ ಚಿಕಿತ್ಸೆ ಪಡೆದುಕೊಳ್ಳಬೇಕೆಂದು ಲಕ್ಷ್ಮೀ ಗೊಂದಿ ಅವರು ಸಾರ್ವಜನಿಕರಿಗೆ ಸಲಹೆ ನೀಡಿದರು. ಸಮುದಾಯ ಆರೋಗ್ಯ ಶುಶ್ರೂಷ ವಿಭಾಗದ ಸಿಬ್ಬಂದಿ, ವಿದ್ಯಾರ್ಥಿಗಳು, ಆಶಾ ಕಾರ್ಯಕರ್ತೆಯರು, ಇದ್ದರು.



# ಬೇವೂರ ಪಿ.ಎಸ್.ಎಸ್. ಕಾಲೇಜಿನಲ್ಲಿ ಎನ್.ಎಸ್.ಎಸ್. ದಿನಾಚರಣೆ

**ಬೇವೂರ :** ಯುವಕರು ದೇಶದ ಶಕ್ತಿಯಾಗಿ ಬೆಳೆಯಬೇಕು. ಗ್ರಾಮೀಣ ಭಾಗದಲ್ಲಿ ಸೇವೆ ಮಾಡಬೇಕೆಂದು ಹಿರಿಯ ಉಪನ್ಯಾಸಕರಾದ ಬಿ. ಬಿ. ಬೇವೂರ ಹೇಳಿದರು. ಸಮಾಜದ ಋಣವನ್ನು ತೀರಿಸಲು ಎನ್. ಎಸ್.ಎಸ್. ಸೇವೆ ಅವಶ್ಯವಾಗಿದೆ ಎಂದು ಕಾರ್ಯಕ್ರಮದ ಮುಖ್ಯ ಅತಿಥಿಗಳಾದ ಡಿ. ವಾಯ್. ಬುಡ್ಡಿಯವರ ಹೇಳಿದರು.

ಹಿರಿಯ ಉಪನ್ಯಾಸಕರಾದ ಎಸ್. ಎಸ್. ಆದಾಪೂರ ಎನ್.ಎಸ್.ಎಸ್. ಗೀತೆ ಹಾಡಿದರು.

ನಾಗಲಿಂಗೇಶ ಬೆಣ್ಣೂರ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಪ್ರಾಚಾರ್ಯರಾದ ಡಾ. ಜಗದೀಶ್ ಭೈರಮಟ್ಟಿ , ಎನ್.ಎಸ್. ಎಸ್. ಅಧಿಕಾರಿಗಳಾದ ಜಿ. ಎಸ್. ಗೌಡರ, ಕನ್ನಡ ಉಪನ್ಯಾಸಕರಾದ ಡಾ. ಎಸ್. ಬಿ. ಹಂಚಿನಾಳ, ಇತಿಹಾಸ ಉಪನ್ಯಾಸಕರಾದ ಡಾ. ಎ. ಎಮ್. ಗೊರಚಿಕ್ಕನವರ ಸೇರಿದಂತೆ ಬೋಧಕೇತರ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

ಬಿ. ಎ. 1 ನೇ ಸೆಮಿಸ್ಟರ್ ವಿದ್ಯಾರ್ಥಿಗಳು ಕಾರ್ಯಕ್ರಮದ ವಿವಿಧ ಹಂತಗಳನ್ನು ನೆರವೇರಿಸಿಕೊಟ್ಟರು.



# ದಾಸೋಹ ಕಾರ್ಯ ಶ್ರೇಷ್ಠವಾದುದು



**ಬನಹಟ್ಟಿ :** ತನು, ಮನ, ಧನವನ್ನು ಸಮಾಜಕ್ಕೆ ಅರ್ಪಣೆ ಮಾಡುವುದಕ್ಕೆ ಶರಣರು ದಾಸೋಹ ಎಂದು ಕರೆದಿದ್ದಾರೆ. ಅದರಲ್ಲೂ ಬಡವರಿಗೆ, ಹಸಿದವರಿಗೆ ನೀಡುವ ಪ್ರಸಾದ ದಾಸೋಹ ಶ್ರೇಷ್ಠವಾದುದು ಎಂದು ಬನಹಟ್ಟಿ ಹಿರೇಮಠದ ಶರಣ ಬಸವ ಶಿವಾಚಾರ್ಯರು ತಿಳಿಸಿದರು.

ಗುರುವಾರಇಲ್ಲಿನಕಾಡಸಿದ್ಧೇಶ್ವರಜಾತ್ರೆಯಅಂಗವಾಗಿ ಹಮ್ಮಿಕೊಂಡ ದಾಸೋಹ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಜಾತ್ರೆಗೆ ಬರುವ ಸಾವಿರಾರು ಸಂಖ್ಯೆಯ ಭಕ್ತರಿಗೆ ಅನ್ನ ದಾಸೋಹದ ಮೂಲಕ ಸೇವೆ ಸಲ್ಲಿಸುತ್ತಿರುವ ಕಾರ್ಯ ಭಗವಂತನಿಗೆ ಪ್ರಿಯವಾದುದು. ದಾಸೋಹ ಕಾರ್ಯದಲ್ಲಿ ತೊಡಗಿದವರ ಕಾರ್ಯವೂ ಶ್ರೇಷ್ಠವಾದುದು ಎಂದು ಶರಣ ಬಸವ ಶಿವಾಚಾರ್ಯರು ತಿಳಿಸಿದರು.

ಐದು ಕ್ವಿಂಟಲ್ ಹಾಲುಗ್ಗಿ ಮತ್ತು ಕಿಚಡಿ ಪ್ರಸಾದವನ್ನು ವಿತರಣೆ ಮಾಡಲಾಯಿತು.

ಶ್ರೀಶೈಲ ಅಥಣಿ, ಗಿರೀಶ ಕಾಡದೇವರ, ದುಂಡಯ್ಯ ಕಾಡದೇವರ, ಶಿಖರಪ್ಪ ಮುಗತಿ, ಬ್ರಿಜ್ಮೋಹನ ಚಿಂಡಕ, ಕಾಡಪ್ಪ ಬಾಬಾನಗರ, ಸುರೇಶ ಚಿಂಡಕ, ಧರೆಪ್ಪ ಉಳ್ಳಾಗಡ್ಡಿ, ಗೋಪಾಲ ಲಡ್ಡಾ, ಬಸವರಾಜ ಮುಗತಿ, ರಾಜಕುಮಾರ, ಕಡಕಬಾವಿ, ನಿಜಗುಣಿ ಕಾಡದೇವರ ಸೇರಿದಂತೆ ಅನೇಕರು ಭಾಗವಹಿಸಿದ್ದರು.

# ಗ್ರಾಮ ಆಡಳಿತಾಧಿಕಾರಿಗಳಿಗೆ ಮೂಲ ಸೌಕರ್ಯ ಕಲ್ಪಿಸಿ

**ರಬಕವಿ–ಬನಹಟ್ಟಿ :** ರಾಜ್ಯ ಸರ್ಕಾರ ಗ್ರಾಮ ಆಡಳಿತಾಧಿಕಾರಿಗಳಿಗೆ ಸುಸಜ್ಜಿತವಾದ ಕಚೇರಿ, ಉತ್ತಮ ಗುಣಮಟ್ಟದ ಪಿಠೋಪಕರಣಗಳು, ಉತ್ತಮ ಗುಣಮಟ್ಟದ ಮೊಬೈಲ್, ಗೂಗಲ್ ಕ್ರೋಮ್ ಬುಕ್, ಪ್ರಿಂಟರ್ ಮತ್ತು ಸ್ಕ್ಯಾನರ್ ಗಳನ್ನು ನೀಡುವುದರ ಜೊತೆಗೆ ಇನ್ನಿತರ ಮೂಲ ಸೌಕರ್ಯಗಳನ್ನು ನೀಡಬೇಕು ಎಂದು ಗ್ರಾಮ ಆಡಳಿತಾಧಿಕಾರಿಗಳ ಜಿಲ್ಲಾ ಘಟಕದ ಅಧ್ಯಕ್ಷ ಮಲ್ಲಿಕಾರ್ಜುನ ಖವಟಕೊಪ್ಪ ಆಗ್ರಹಿಸಿದರು.

ಗುರುವಾರ ಇಲ್ಲಿನ ತಹಶೀಲ್ದಾರ್ ಕಾರ್ಯಾಲಯದ ಆವರಣದಲ್ಲಿ ಕೈಗೊಂಡ ಅನಿರ್ಧಿಷ್ಠಾವಧಿ ಮುಷ್ಕರದ ಸಂದರ್ಭದಲ್ಲಿ ತಹಶೀಲ್ದಾರ್ ಗಿರೀಶ ಸ್ವಾದಿಯವರಿಗೆ ಮನವಿ ಸಲ್ಲಿಸಿ ಮಾತನಾಡಿದರು.

ಇದೇ ಸಂದರ್ಭದಲ್ಲಿ ತಾಲ್ಲೂಕು ಘಟಕದ ಅಧ್ಯಕ್ಷ ರಾಚಯ್ಯ ಮಠಪತಿ ಮಾತನಾಡಿ, ಗ್ರಾಮ ಆಡಳಿತಾಧಿಕಾರಿಗಳು ನಿರಂತರವಾಗಿ ಮೊಬೈಲ್ ನಲ್ಲಿಯೇ ಕಾರ್ಯ ಮಾಡುತ್ತಿರುವುದರಿಂದ ತೊಂದರೆಯಾಗಿದೆ. ಕಂದಾಯ ಇಲಾಖೆಯು ಅಭಿವೃದ್ಧಿಪಡಿಸಿರುವ ಸಂಯೋಜನೆ, ಇ– ಆಫೀಸ್, ಆಧಾರ ಸೀಡ್, ಲ್ಯಾಂಡ್ ಬೀಟ್, ಬಗ್ಗೈರ ಹುಕುಂ, ಗರುಡ ಆ್ಯಪ್, ಭೂಮಿ, ಕೃಷಿ ಗಣತಿ, ನೀರಾವರಿ ಗಣತಿ ಸೇರಿದಂತೆ ಒಟ್ಟು 21 ಸೇವೆಗಳನ್ನು ಸಲ್ಲಿಸಬೇಕಾಗಿದೆ. ಅಭಿವೃದ್ಧಿ ಪಡಿಸಿರುವ ಮೊಬೈಲ್ ಮತ್ತು ವೆಬ್ ತಂತ್ರಾಂಶಗಳ ಮೂಲಕ ಕರ್ತವ್ಯ ನಿರ್ವಹಿಸುತ್ತಿರುವುದರಿಂದ ಹಾಗೂ ಸಿ ವೃಂದದ ನೌಕರರು ಹತ್ತು ಪಟ್ಟು ಹೆಚ್ಚು ಕಾರ್ಯಗಳ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದಾರೆ. ಆದ್ದರಿಂದ ಗ್ರಾಮ ಲೆಕ್ಕಾಧಿಕಾರಿಗಳಿಗೆ ತಾಂತ್ರಿಕ ಹುದ್ದೆಗಳಿಗೆ ನೀಡುವ ವೇತನ ಶ್ರೇಣಿಯನ್ನು ನೀಡುವಂತೆ ಆಗ್ರಹಿಸಲಾಗಿದೆ.

ಈಗಾಗಲೇ ನಮ್ಮೆಲ್ಲ ತೊಂದರೆಗಳನ್ನು ಕಂದಾಯ ಇಲಾಖೆಯ ಸಚಿವರ ಮತ್ತು ಅಧಿಕಾರಿಗಳ ಗಮನಕ್ಕೆ ತರಲಾಗಿದೆ. ಆದ್ದರಿಂದ ರಾಜ್ಯಾದ್ಯಂತ ಗ್ರಾಮ ಆಡಳಿತಾಧಿಕಾರಿಗಳು ಲೇಖನಿ ಸ್ಥಗಿತ ಮುಷ್ಕರವನ್ನು ಮಾಡುತ್ತಿದ್ದಾರೆ. ರಾಜ್ಯ ಸರ್ಕಾರ ಆದಷ್ಟು ಬೇಗನೆ ನಮ್ಮ ಬೇಡಿಕೆಗಳಿಗೆ ಸ್ಪಂದಿಸಬೇಕು ಎಂದು ತಿಳಿಸಿದರು.

ಮುಷ್ಕರದಲ್ಲಿ ಗೌರವಾಧ್ಯಕ್ಷ ಸದಾಶಿವ ಕುಂಬಾರ, ಬಸವರಾಜ ಗುಂಡಿ, ರೇವಣಸಿದ್ಧ ಕಾಮಟೆ, ಅಮಸಿದ್ದ ಬಿರಾದಾರ, ರವಿ ಈಟಿ, ಸೌರಭ ಮೇತ್ರಿ, ಮಂಜುನಾಥ ನೀಲನ್ನವರ, ಸಿ. ಎನ್. ಹೊಸಮನಿ, ತ್ರಿವೇಣಿ ದೇವರಮನಿ, ಸಂಗೀತಾ ವಾಲೀಕಾರ, ದೀಪಾ ಮೇತ್ರಿ, ಪೂಜಾ ಜಿಟ್ಟಿ, ಶಬಾನಾ ಜಮಾದಾರ, ಪ್ರಕಾಶ ಮಠಪತಿ, ಆರ್. ಎಸ್. ಸಾತಿಹಾಳ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



# ಯುವ ಪ್ರತಿಭಾವಂತ ಕಲಾವಿದರನ್ನು ಪ್ರೋತ್ಸಾಹಿಸಿ



**ಬನಹಟ್ಟಿ:** ಗ್ರಾಮೀಣ ಪ್ರದೇಶದ ಯುವ ಪ್ರತಿಭಾವಂತ ಕಲಾವಿದರನ್ನು ಪ್ರೋತ್ಸಾಹಿಸುವುದರಿಂದ ಮುಂದಿನ ದಿನಗಳಲ್ಲಿ ನಮ್ಮ ದೇಸಿ ಕಲೆಗಳು ಮತ್ತು ಕಲಾವಿದರನ್ನು ಉಳಿಸಲು ಸಾಧ್ಯವಾಗುತ್ತದೆ ಎಂದು ಸ್ಥಳೀಯ ಮಂಗಳವಾರ ಪೇಟೆಯ ದೈವ ಮಂಡಳಿಯ ಅಧ್ಯಕ್ಷ ಶ್ರೀಶೈಲ ಧಬಾಡಿ ತಿಳಿಸಿದರು.

ಬುಧವಾರ ರಾತ್ರಿ ಕಾಡಸಿದ್ಧೇಶ್ವರ ಜಾತ್ರೆಯ ಅಂಗವಾಗಿ ದೇವಸ್ಥಾನದಆವರಣದಲ್ಲಿಗಾನಯೋಗಿಮೆಲಡೋಸಿ ಹಮ್ಮಿಕೊಂಡ ಸಂಗೀತ ಸಂಜೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸೋಮವಾರ ಪೇಟೆಯ ದೈವ ಮಂಡಳಿಯ ಅಧ್ಯಕ್ಷ ಮಲ್ಲಿಕಾರ್ಜುನ ತುಂಗಳ ಮಾತನಾಡಿ, ಜಾತ್ರೆಗಳು ನಮ್ಮೆಲ್ಲರನ್ನು ಒಗ್ಗೂಡಿಸುವುದರ ಜೊತೆಗೆ ಮನರಂಜನೆಯನ್ನು ಕೂಡ ನೀಡುತ್ತವೆ. ನಮ್ಮ ಹಬ್ಬ ಹರಿ ದಿನಗಳನ್ನು ಆಚರಣೆ ಮಾಡುವುದರಿಂದ ನಮ್ಮ ಕಲೆ, ಸಂಸ್ಕೃತಿಯನ್ನು ಉಳಿಸಿ ಬೆಳೆಸಲು ಸಾಧ್ಯವಾಗುತ್ತದೆ ಎಂದರು.

ಶಂಕರ ಜಾಲಿಗಿಡದ, ಬ್ರಿಜ್ಮೋಹನ ಡಾಗಾ, ಸೋಮು ಗೊಂಬಿ, ದುಂಡಯ್ಯ ಕಾಡದೇವರ, ಪವಿತ್ರಾ ತುಕ್ಕನ್ನವರ, ಈರಣ್ಣ ಬಾಣಕಾರ, ರಾಜು ಬಾಣಕಾರ, ಗುರು ಹೊರಟ್ಟಿ, ಮಲ್ಲಿಕಾರ್ಜುನ ಭದ್ರನವರ, ರಾಜು ಖಡಕಬಾವಿ, ರವಿ ಕರಲಟ್ಟಿ, ಗುಂಡು ಹೂಲಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಸ್ಟೇಫಿ ಹುಬ್ಬಳ್ಳಿ, ರಾಜೇಶ್ವರಿ, ಲಕ್ಷ್ಮಿ ಧಾರವಾಡ, ಅರುಣ, ಶ್ರೀನಿವಾಸ ಹಳ್ಯಾಳ, ಬಸವರಾಜ, ರಾಜು, ಮಲ್ಲು ಗೋಕಾಕ ಸೇರಿದಂತೆ ಅನೇಕ ಹಾಡುಗಾರರು ನಾಲ್ಕು ಗಂಟೆಗಳಿಗಿಂತ ಹೆಚ್ಚು ಕಾಲ ಹಾಡಿ ಸೇರಿದ್ದ ಜನರನ್ನು ರಂಜಿಸಿದರು.

# ಖಾಸಗಿ ಶಾಲೆಗಳನ್ನು ಮೀರಿಸುವ ಸಾಧನೆ ಸರ್ಕಾರಿ ಶಾಲಾ ಶಿಕ್ಷಕರು ಮಾಡಬೇಕು

## ಮಕ್ಕಳಲ್ಲಿ ಅಪೌಷ್ಠಿಕತೆ, ರಕ್ತಹೀನತೆ ದೂರಾಗಿಸಲು ಮೊಟ್ಟೆ ಸಹಕಾರಿ : ಶಾಸಕ ಸಿದ್ದು ಸವದಿ

**ರಬಕವಿ–ಬನಹಟ್ಟಿ :** ಭಾರತದಲ್ಲಿನ ಮಕ್ಕಳ ದೈಹಿಕ ಮತ್ತು ಮಾನಸಿಕ ಬೆಳವಣಿಗೆಗೆ ಅಪೌಷ್ಠಿಕ ಆಹಾರ ಸೇವನೆಯೇ ಕಾರಣವೆಂದು ಸಮೀಕ್ಷೆಗಳಲ್ಲಿ ಕಂಡು ಬಂದ ಕಾರಣ ವಾರದಲ್ಲಿ ಒಂದು ಮೊಟ್ಟೆ ನೀಡುವ ಯೋಜನೆ ಸರ್ಕಾರ ಆರಂಭಿಸಿತ್ತು. ಇದೀಗ ವಾರದಲ್ಲಿ 6ದಿನ ಪೌಷ್ಠಿಕ ಭರಿತ ಮೊಟ್ಟೆ ,ಶೇಂಗಾ ಚಿಕ್ಕಿ, ಬಾಳೆಹಣ್ಣು ನೀಡುವತ್ತ ವಿಶ್ವದ ಮಹಾದಾನಿ ಅಜೀಂಪ್ರೇಮ್‌ಜಿ ಫೌಂಡೇಶನ್ ರಾಜ್ಯದ ಮಕ್ಕಳ ಅಪೌಷ್ಠಿಕತೆ ದೂರಗೊಳಿಸಲು ರು.1591 ಕೋಟಿ ಅನುದಾನ ನೀಡುವ ಮೂಲಕ ಪೌಷ್ಠಿಕ ಆಹಾರ ನೀಡಲು ಮುಂದಾಗಿರುವುದು ಶ್ಲಾಘನೀಯವಾಗಿದೆ ಎಂದು ಶಾಸಕ ಸಿದ್ದು ಸವದಿ ನುಡಿದರು.

ತಾಲೂಕಿನ ಯಲ್ಲಟ್ಟಿ ಗ್ರಾಮದಲ್ಲಿ ನಡೆದ ತಾಲೂಕು ಮಟ್ಟದ ಕಾರ್ಯಕ್ರಮಕ್ಕೆ ಸಸಿಗೆ ನೀರುಣಿಸುವ ಮೂಲಕ ಚಾಲನೆ ನೀಡಿ ಮಾತನಾಡಿದ ಅವರು, ಮಕ್ಕಳು ದೈಹಿಕ ಮತ್ತು ಮಾನಸಿಕ ಸಕ್ಷಮತೆ ಹೊಂದಲು ಹಾಗೂ ರಕ್ತಹೀನತೆ, ಅಪೌಷ್ಠಿಕತೆಯಿಂದ ದೂರವಾಗಿ ಆರೋಗ್ಯವಂತರಾಗಿರಲು ಪೌಷ್ಠಿಕ ಆಹಾರ ನೀಡಲಾಗುತ್ತಿದೆ. ಮಕ್ಕಳ ಸರ್ವಾಂಗೀಣ ಪ್ರಗತಿಯೇ ಶಿಕ್ಷಣದ ಮೂಲ ಉದ್ದೇಶವಾಗಿದ್ದು, ಹುಟ್ಟುತ್ತಲೇ ಯಾವ ಮಕ್ಕಳು ಜಾಣ ಮತ್ತು ದಡ್ಡರೆಂದು ಜನಿಸಿರುವುದಿಲ್ಲ. ಸರ್ಕಾರಿ ಶಾಲೆಗಳ ಶಿಕ್ಷಕರು ಶಿಕ್ಷಕ ಸಾಮರ್ಥ್ಯ ಪರೀಕ್ಷೆ ಮುಗಿಸಿದ ಪ್ರತಿಭಾವಂತರಾಗಿದ್ದರೂ ಖಾಸಗಿ ಶಾಲೆಗಳಂತೆ ನಮಗೆ ಫಲಿತಾಂಶ ಬರುತ್ತಿಲ್ಲ. ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ವಿಶೇಷ ತರಗತಿ ನಡೆಸಿ ಕಲಿಕಾ ಸಾಮರ್ಥ್ಯ ಹೆಚ್ಚಿಸಬೇಕು. ವಿದ್ಯಾದಾನ ಪವಿತ್ರ ಕಾರ್ಯವಾಗಿದ್ದು, ದೇಶದ ಸರ್ವತೋಮುಖ ಪ್ರಗತಿಯಲ್ಲಿ ಶಿಕ್ಷಕರ ಪಾತ್ರ ಗುರುತರವಾಗಿರುತ್ತದೆ ಎಂದರಿತು ಹೊಣೆಗಾರಿಕೆಯಿಂದ ಶಿಕ್ಷಕರು ಬೋಧನೆಯಲ್ಲಿ ತೊಡಗಬೇಕೆಂದರು.

ಎಸ್‌ಡಿಎಂಸಿ ಅಧ್ಯಕ್ಷ ಅಶೋಕ ಕಿತ್ತೂರ ಅಧ್ಯಕ್ಷತೆ ವಹಿಸಿದ್ದರು.

ಬಾಗಲಕೋಟೆ ಡಿಡಿಪಿಐ ವಿವೇಕಾನಂದ ಎಂ. ಮಾತನಾಡಿ ತಾಲೂಕು ಮಟ್ಟದಲ್ಲಿ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗಿದ್ದು, ಇಂದಿನಿಂದ ವಾರದಲ್ಲಿ 4 ದಿನ 1ರಿಂದ 10ನೇ ತರಗತಿಯ ಸರ್ಕಾರಿ ಮತ್ತು ಅನುದಾನಿತ ಶಾಲಾ ಮಕ್ಕಳಿಗೆ ಪೌಷ್ಠಿಕಯುತ ಮೊಟ್ಟೆ, ಶೇಂಗಾ ಚಿಕ್ಕಿ, ಬಾಳೆಹಣ್ಣು ವಿತರಿಸಲಾಗುತ್ತದೆ. ಶಾಲೆಯಿಂದ ಯಾವುದೇ ಮಗು ದೂರ ಉಳಿಯಬಾರದು ಮತ್ತು ಅಪೌಷ್ಠಿಕತೆ, ರಕ್ತಹೀನತೆಯಿಂದ ನರಳಬಾರದೆಂಬ ಉದ್ದೇಶವೂ ಯೋಜನೆ ಜಾರಿಗೆ ಮುಖ್ಯವಾಗಿದೆ. ಶಾಲೆಗೆ ಮಕ್ಕಳನ್ನು ತಪ್ಪದೇ ಪಾಲಕರು ಕಳಿಸಬೇಕು ಮತ್ತು ಶಿಕ್ಷಕರು ಶಾಲೆ ಬಿಟ್ಟ ಮಕ್ಕಳ ಬಗ್ಗೆ ತಿಳಿದುಕೊಂಡು ಪಾಲಕರ ಮನವೊಲಿಸಿ ಶಾಲೆಗೆ ಕರೆತಂದು ಗುಣಾತ್ಮಕ ಶಿಕ್ಷಣ ನೀಡಬೇಕೆಂದರು. ಸರ್ಕಾರದೊಡನೆ ಅಜೀಂ ಪ್ರೇಮ್‌ಜಿ ಸಂಘಟನೆ ಕೈಜೋಡಿಸಿದ್ದು ಪ್ರಶಂಸಾರ್ಹವೆಂದರು.

ಈಲ್ಲಾ ಬಿಸಿಯೂಟ ಅಧಿಕಾರಿ ಕೇಶವ ಪೆಟ್ಲೂರ ಪೌಷ್ಠಿಕ ಆಹಾರ ಪೂರೈಕೆಯ ಮಹತ್ತತೆ ಬಗ್ಗೆ ವಿವರಿಸಿದರು. ಬಿಇಓ ಅಶೋಕ ಬಸನ್ನವರ ತಾಲೂಕಿನಲ್ಲಿ 1ಲಕ್ಷಕ್ಕೂ ಹೆಚ್ಚು ಮಕ್ಕಳಿದ್ದು, ಅವರಲ್ಲಿ ಬಹುತೇಕ ಬಡತನ ರೇಖೆಗಿಂತ ಕೆಳಗಿನ ಮಕ್ಕಳಿದ್ದು, ಅವರ ದೈಹಿಕ, ಮಾನಸಿಕ ಸಕ್ಷಮತೆ ಹೆಚ್ಚಿಸಲು ಈ ಯೋಜನೆ ಪ್ರಯೋಜನಕಾರಿಯಾಗಿದೆ. ಪಾಲಕರು ತಮ್ಮ ಮಕ್ಕಳನ್ನು ತಪ್ಪದೇ ಶಾಲೆಗೆ ಕಳಿಸುವಂತೆ ನೋಡಿಕೊಳ್ಳಬೇಕೆಂದರು.

ವೇದಿಕೆಯಲ್ಲಿ ತಾಲೂಕು ಬಿಸಿಯೂಟ ಅಧಿಕಾರಿ ಸಿ.ಎಚ್.ಕಲ್ಯಾಣಿ, ಗ್ರಾಪಂ ಅಧ್ಯಕ್ಷ ಮಹಾದೇವ ಮೋಪಗಾರ, ಅರ್ಜುನ ಕಾಖಂಡಕಿ, ಬಿ.ಎಸ್.ಪಾಟೀಲ, ಈಶ್ವರ ಕಾಡದೇವರ, ರವಿ ಸಂಪಗಾಂವಿ, ದಯಾನಂದ ಯರಗಲ್, ಎಸ್. ಕೆ.ಕಲ್ಲೂರ, ಬಿಆರ್‌ಸಿ ಸತೀಶ ಬಡ್ಡಿ ಸೇರಿದಂತೆ ಶಿಕ್ಷಕರು, ಪಾಲಕರು ಮತ್ತು ಗ್ರಾಪಂ ಸದಸ್ಯರು ಉಪಸ್ಥಿತರಿದ್ದರು. ಅಮೃತಾ ಪಾಟೀಲ ಸಂಗಡಿಗರು ಸ್ವಾಗತಗೀತೆ ಹಾಡಿದರು. ಮುಖ್ಯ ಗುರು ಎಸ್.ಆರ್.ಮರಿಗುದ್ದಿ ಸ್ವಾಗತಿಸಿದರು. ಎ.ಎಸ್.ಜಮಂಖಿಡಿ ವಂದಿಸಿದರು.



## ಎನ್ ಎಸ್ ಎಸ್ ರಾಷ್ಟ್ರಪ್ರೇಮ ಮತ್ತು ಸೇವಾ ಭಾವನೆಗಳನ್ನು ಬೆಳೆಸುವದು: ಉಮೇಶ್ ನೀಲಪ್ಪನವರ




**ಧಾರವಾಡ :** ವಿದ್ಯಾರ್ಥಿಗಳ ವ್ಯಕ್ತಿತ್ವವನ್ನು ಸಮಾಜ ಸೇವೆಯ ಮೂಲಕ ಅಭಿವೃದ್ಧಿಗೊಳಿಸುವುದು ಮತ್ತು ರಾಷ್ಟ್ರ ನಿರ್ಮಾಣದ ಕಾರ್ಯಗಳಲ್ಲಿ ಭಾಗವಹಿಸಿ ರಾಷ್ಟ್ರಪ್ರೇಮ ಮತ್ತು ಸೇವಾ ಭಾವನೆಗಳನ್ನು ಬೆಳೆಸಿಕೊಳ್ಳುವುದು ಎಂದು ಶ್ರೀ ಉಮೇಶ್ ನೀಲಪ್ಪನವರ್ ಎನ್ ಎಸ್ ಎಸ್ ಅಧಿಕಾರಿ ಮೃತುಂಜಯ್ ಕಾಲೇಜ್ ಧಾರವಾಡ ಮುಖ್ಯ ಅತಿಥಿಗಳಾಗಿ ಅಂಜುಮನ್ ಪದವಿ ಮಹಾವಿದ್ಯಾಲಯ ಧಾರವಾಡದಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು.
ಅಂಜುಮನ್ ಪದವಿ ಮಹಾವಿದ್ಯಾಲಯದಲ್ಲಿ ಎನ್‌ಎಸ್‌ಎಸ್ ದಿನಾಚರಣೆಯನ್ನು ಆಚರಿಸಲಾಯಿತು.ಗಾಂಧೀಜಿ ಅವರ ಶತವರ್ಷಾವಾದ 1969ರಲ್ಲಿ ಈ ಯೋಜನೆಗೆ ಚಾಲನೆ ನೀಡಲಾಯಿತು. ಇದು ಭಾರತ ಸರ್ಕಾರದಿಂದ ಸಾರ್ವಜನಿಕ ಸೇವಾ ಸಂಸ್ಥೆ ಎಂದು ಡಾ. ಐ ಎ ಮುಲ್ಲಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು,
ಕಾರ್ಯಕ್ರಮಕ್ಕೆ ಆಗಮಿಸಿದ ಗಣ್ಯ ಮಾನ್ಯರನ್ನು ಡಾ. ನಾಗರಾಜ್ ಗುದಗನವರ್ ಅವರು ಸ್ವಾಗತಿಸಿ ಪರಿಚಯಿಸಿದರು. ಕಾರ್ಯಕ್ರಮದಲ್ಲಿ ಐ ಕ್ಯೂ ಎ ಸಿ ಸಂಯುಜಕರಾದ ಡಾ. ಎನ್ ಬಿ ನಾಲತವಾಡ, ಉಪಸ್ಥಿತರಿದ್ದರು. ಡಾ. ಸೌಭಾಗ್ಯ ಜಾದವ್ ಕಾರ್ಯಕ್ರಮ ನಿರೂಪಿಸಿದರು. ಡಾ. ಸೈಯದ್ ತಾಜುನ್ನಿಸಾ ವಂದನಾರ್ಪಣೆ ಮಾಡಿದರು.

## ರಂಗಭೂಮಿಯು ಜನರನ್ನು ತಲುಪುವ ಪ್ರಭಾವಿ ಮಾಧ್ಯಮ: ರಘುನಂದನ

**ಧಾರವಾಡ :** ರಾಜಕೀಯ, ಸಾಮಾಜಿಕ, ವಿಚಾರಗಳನ್ನು ಹುಟ್ಟು ಹಾಕುವ, ಚಿಂತನೆಯನ್ನು ಮೂಡಿಸುವ, ಸಮಸ್ಯೆಗಳಿಗೆ ಪರಿಹಾರಗಳನ್ನು ನೀಡುವಂತಹ ನಾಟಕಗಳನ್ನು ರಂಗಾಯಣಗಳು ಪ್ರಸ್ತುತ ಪಡಿಸುವ ಮೂಲಕ ಜನರನ್ನು ಸರಳವಾಗಿ ತಲುಪುವ ಪ್ರಭಾವಿ ಮಾಧ್ಯಮವಾಗಿದೆ ಎಂದು ರಂಗನಿರ್ದೇಶಕ ರಘುನಂದನ ಅವರು ಹೇಳಿದರು.
ಇಂದು ರಂಗಾಯಣದ ಸಾಂಸ್ಕೃತಿಕ ಸಮುಚ್ಛಯ ಸಭಾಭವನದಲ್ಲಿ "ಆಧುನಿಕ ಕನ್ನಡ ರಂಗಭೂಮಿಯ ಬೆಳ್ಳಿಚುಕ್ಕಿ, ರಂಗಋಷಿ ಬಿ.ವಿ.ಕಾರಂತರ ಜನ್ಮದಿನದ ಅಂಗವಾಗಿ ಬಿ.ವಿ. ಕಾರಂತ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ, ರಂಗಭೂಮಿ, ರಂಗಾಯಣ: ಗೊತ್ತುಗುರಿಯ ಮಾತು ಉಪನ್ಯಾಸ ನೀಡಿ, ಅವರು ಮಾತನಾಡಿದರು.
ರಂಗಭೂಮಿಯನ್ನು ಉಳಿಸಿ, ಬೆಳೆಸುವಲ್ಲಿ ಕಾರಂತರು ಪ್ರಮುಖ ಪಾತ್ರವನ್ನು ವಹಿಸಿದ್ದರು. ಅತ್ಯಂತ ಸರಳ ವ್ಯಕ್ತಿತ್ವವುಳ್ಳ ರಂಗಕರ್ಮಿಯನ್ನು ಇಂದಿನ ಜನಾಂಗ ಕಳೆದುಕೊಂಡಿದೆ. ಕಾರಂತರು ಯಾವುದೇ ತರಹದ ಅಪೇಕ್ಷೆಯನ್ನು ಪಡೆಯದೇ ರಂಗಭೂಮಿಯ ಬೆಳವಣಿಗೆಗಾಗಿ ಶ್ರಮಿಸಿದ, ಸ್ವಾಭಿಮಾನ ಹೊಂದಿದ ಕಾರಂತರು ಎಲ್ಲರೊಂದಿಗೆ ಆತ್ಮೀಯತೆ ಹಾಗೂ ಸ್ನೇಹಮಯ ಭಾವನೆಯನ್ನು ಹೊಂದಿದವರಾಗಿದ್ದರು ಎಂದರು.
ರಂಗಾಯಣಗಳು ಜನರನ್ನು ತಲುಪುವಂತಹ ನಾಟಕಗಳನ್ನು ಸಿದ್ಧಪಡಿಸಿ, ಪ್ರದರ್ಶನ ಮಾಡಬೇಕು. ಒಂದು ನಾಟಕ ಸಿದ್ಧವಾಗಬೇಕಾದರೆ ಅದಕ್ಕೆ ತನ್ನದೇ ಆದ ತಯಾರಿಕೆ ಇರುತ್ತದೆ. ಹೀಗೆ ಸಿದ್ಧಗೊಂಡ ನಾಟಕವನ್ನು ಮೊದಲು ಸಣ್ಣ ಸಣ್ಣ ಊರುಗಳಲ್ಲಿ ಪ್ರದರ್ಶನ ಮಾಡಿ, ನಂತರ ದೊಡ್ಡ ಮಟ್ಟದಲ್ಲಿ ಪ್ರದರ್ಶನ ಮಾಡುವ ಮೂಲಕ ಜನರಿಗೆ ಉತ್ತಮ ಸಂದೇಶಗಳನ್ನು ನೀಡಬೇಕು ಎಂದು ಹೇಳಿದರು.
ನಂತರ "ನಾನು ಸತ್ತಮೇಲೆ" ಕವನ ಸಂಕಲನ ಮತ್ತು ಬೇಂದ್ರೆ ಕಾವ್ಯ ಕುರಿತ "ತುಯ್ತವೆಲ್ಲ ನವ್ಯದತ್ತ" ಪುಸ್ತಕದ ಕುರಿತು ಮಾತನಾಡಿದರು.
ಕರ್ನಾಟಕ ನಾಟಕ ಅಕಾಡೆಮಿ ಸದಸ್ಯರಾದ ಗಾಯತ್ರಿ ಮಹಾದೇವ, ರಂಗಾಯಣದ ಆಡಳಿತಾಧಿಕಾರಿಗಳಾದ ಶಶಿಕಲಾ ವೀ ಹುಡೇದ ಅವರು ಉಪಸ್ಥಿತರಿದ್ದರು. ರಂಗಾಯಣ ನಿರ್ದೇಶಕ ಡಾ.ರಾಜು ತಾಳಿಕೋಟೆ ಅವರು ಅಧ್ಯಕ್ಷತೆ ವಹಿಸಿದ್ದರು. ಸುನಂದಾ ನಿಂಬನಗೌಡರ ಅವರು ಕಾರಂತರ ರಂಗಗೀತೆಗಳನ್ನು ಪ್ರಸ್ತುತ ಪಡಿಸಿದರು. ಸಾಹಿತಿಗಳು, ರಂಗನಿರ್ದೇಶಕರು, ಕಲಾವಿದರು ಸೇರಿದಂತೆ ಇತರರು ಇದ್ದರು.

## ‘ಮಕ್ಕಳ ಅಧ್ಯಯನ ಭಾಷೆಯೇ ಚಿತ್ರಕಲೆ’

**ಧಾರವಾಡ :** ಪ್ರತೀ ಮಗುವೂ ವಿಭಿನ್ನ ಶೈಲಿಗಳಲ್ಲಿ ತನ್ನ ಮನದಾಳದ ಕಲ್ಪನೆಗಳಿಗೆ ಅನುಸಾರವಾಗಿ ಗೀಚುವುದರಲ್ಲಿಯೇ ಆನಂದವನ್ನು ಅನುಭವಿಸುತ್ತದೆ. ನಂತರ ಶಾಲಾ ಕಲಿಕೆಯಲ್ಲಿ ಶಿಕ್ಷಕರು ಚಿತ್ರಗಳ ಮೂಲಕವೇ ಅಕ್ಷರಾಭ್ಯಾಸ ಆರಂಭಿಸುತ್ತಾರೆ. ಹಾಗಾಗಿ ಮಕ್ಕಳ ಅಧ್ಯಯನ ಭಾಷೆಯೇ ಚಿತ್ರಕಲೆಯಾಗಿದೆ ಎಂದು ಶಾಲಾ ಶಿಕ್ಷಣ ಇಲಾಖೆಯ ಕಿತ್ತೂರು ಕರ್ನಾಟಕ ಶೈಕ್ಷಣಿಕ ವಲಯದ ಹೆಚ್ಚುವರಿ ಆಯುಕ್ತೆ ಜಯಶ್ರೀ ಶಿಂತ್ರಿ ಪ್ರತಿಪಾದಿಸಿದರು.
ಅವರು ನಗರದ ಸರಕಾರಿ ಆರ್ಟ ಗ್ಯಾಲರಿಯಲ್ಲಿ ತಮ್ಮ ಕಚೇರಿಯ ವತಿಯಿಂದ ಹಮ್ಮಿಕೊಂಡಿರುವ ಬೆಳಗಾವಿ ವಿಭಾಗ ಮಟ್ಟದ ಪ್ರೌಢ ಶಾಲಾ ಚಿತ್ರಕಲಾ ಶಿಕ್ಷಕರ 5 ದಿನಗಳ ಕಲಾಕೃತಿ ರಚನಾ ಶಿಬಿರವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ಚಿತ್ರಕಲೆಯು ವಿದ್ಯಾರ್ಥಿಗಳ ಮಾನಸಿಕ ಬೆಳವಣಿಗೆಗೆ ಸ್ವಾಭಾವಿಕ ಸಾಧನವಾಗಿದೆ. ಮಕ್ಕಳಲ್ಲಿ ಸೃಜನಶೀಲತೆ ಮತ್ತು ಭಾವನೆಗಳ ಅಭಿವ್ಯಕ್ತಿಯ ಕಲ್ಪನಾಶಕ್ತಿ ಅಧಿಕಗೊಳ್ಳಲು ಚಿತ್ರಕಲೆ ನೆರವಾಗುತ್ತದೆ ಎಂದರು.



ಈ ಹಿಂದೆ ‘ಗಾಂಧೀಜಿ–150 : ಕುಂಚ ನಮನ’ ಹಾಗೂ ‘ನಕಲು ಮುಕ್ತ ಪರೀಕ್ಷಾ ವ್ಯವಸ್ಥೆ’ ಎಂಬ ಪ್ರಧಾನ ಪರಿಕಲ್ಪನೆಗಳಲ್ಲಿ ನಮ್ಮ ಆಯುಕ್ತಾಲಯದಿಂದಲೇ ಎರಡು ಭಾರಿ ಯಶಸ್ವೀ ಶಿಬಿರಗಳನ್ನು ಸಂಘಟಿಸಲಾಗಿದೆ. ಪ್ರಸ್ತುತ 2024–25ರ ಶೈಕ್ಷಣಿಕ ಬಲವರ್ಧನೆ ವರ್ಷದ ಅಂಗವಾಗಿ ‘ನಮ್ಮ ಶಾಲೆ–ನಮ್ಮ ಜವಾಬ್ದಾರಿ’ ಎಂಬ ಪ್ರಧಾನ ಆಶಯದ ಅಡಿಯಲ್ಲಿ ಗುಣಮಟ್ಟದ ಶಿಕ್ಷಣ ಹಾಗೂ ವಿದ್ಯಾರ್ಥಿಗಳಲ್ಲಿ ನೈತಿಕ ಮೌಲ್ಯಗಳ ವಿಕಾಸದ ಪರಿಕಲ್ಪನೆಗಳೊಂದಿಗೆ ವಿಜಯಪೂರ, ಬಾಗಲಕೋಟ, ಬೆಳಗಾವಿ, ಉತ್ತರಕನ್ನಡ, ಧಾರವಾಡ, ಹಾವೇರಿ, ಗದಗ, ಶಿರಸಿ ಹಾಗೂ ಚಿಕ್ಕೋಡಿ ಜಿಲ್ಲೆಗಳ 50 ಜನ ಪ್ರೌಢ ಶಾಲಾ ಚಿತ್ರಕಲಾ ಶಿಕ್ಷಕರು ವಿಶಿಷ್ಟ ಕಲಾಕೃತಿಗಳನ್ನು ಸಿದ್ಧಪಡಿಸಲಿದ್ದಾರೆ ಎಂದೂ ಜಯಶ್ರೀ ಶಿಂತ್ರಿ ಹೇಳಿದರು.
ಇಲಾಖೆಯ ಜಂಟಿ ನಿರ್ದೇಶಕ ಈಶ್ವರ ನಾಯಕ ಮಾತನಾಡಿ, ಮಕ್ಕಳ ಚಿತ್ರಗಳಲ್ಲಿ ಒಂದು ಶಕ್ತಿ ಇದೆ. ಕಾರಣ ಮಕ್ಕಳ ಚಿತ್ರಕಲೆ ಶುದ್ಧವಾದ ಕಲೆ. ಹಾಗಾಗಿ ಮಕ್ಕಳ ಚಿತ್ರಗಳು ಅಮೂಲ್ಯವಾದವು. ಅವರು ತಮ್ಮದೇ ಆದ ಕಲ್ಪನೆಯಿಂದಲೇ ಚಿತ್ರಿಸುತ್ತಾರೆ. ಅವರ ಚಿತ್ರಗಳೆಂದರೆ ಅನುಭವ ಪರಂಪರೆಯ ಅಭಿವ್ಯಕ್ತಿಯಾಗಿದೆ ಎಂದರು.
ಆಯುಕ್ತರ ಕಚೇರಿಯ ಆಡಳಿತ ಡಿಡಿಪಿಐ ಸಂಜೀವ ಬಿಂಗೇರಿ, ಸರಕಾರಿ ಚಿತ್ರಕಲಾ ಕಾಲೇಜಿನ ಪ್ರಾಚಾರ್ಯ ಡಾ. ಬಸವರಾಜ ಕುರಿಯವರ ಹಾಗೂ ‘ಜೀವನ ಶಿಕ್ಷಣ’ ಮಾಸಪತ್ರಿಕೆಯ ನಿವೃತ್ತ ಸಂಪಾದಕ ಗುರುಮೂರ್ತಿ ಯರಗಂಬಳಿಮಠ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದರು. ಹಿರಿಯ ಚಿತ್ರಕಲಾ ವಿಷಯ ಪರಿವೀಕ್ಷಕ ಪಿ.ಆರ್. ಬಾರಕೇರ, ಎಸ್.ಎ. ಕೇಸರಿ, ಗುರುರಾಜ ಅಂಬೇಕರ, ರವಿ ಗೋಡಕೆ, ಗೋಪಾಲ ಚಲವಾದಿ, ಇಸೂಫ್‌ಅಲಿ ಖಲಾಸಿ, ವಿಜಯಕುಮಾರ ಶಿಂಗೆ, ಹೇಮಂತ ಲಮಾಣಿ ಇದ್ದರು.
ಯೋಜನಾ ಸಹಾಯಕ ಪ್ರವೀಣ ಬಿರಾದಾರ ಸ್ವಾಗತಿಸಿದರು. ಹಿರಿಯ ಸಹಾಯಕ ನಿರ್ದೇಶಕ ಬಿ.ವೈ. ಭಜಂತ್ರಿ ವಂದಿಸಿದರು. ಚಿತ್ರಕಲಾ ಶಿಕ್ಷಕ ಡಾ. ಸಂಗಮೇಶ ಬಗಲಿ ಸ್ವತಃ ಸಿದ್ಧಪಡಿಸಿ ತಂದಿದ್ದ ಆಯುಕ್ತರ ಭಾವಚಿತ್ರವನ್ನು ಜಯಶ್ರೀ ಶಿಂತ್ರಿ ಅವರಿಗೆ ಸಲ್ಲಿಸಿದರು.

## ಕಾದಂಬರೀ ಅವಲೋಕನ–ಸಂವಾದ ಕಾರ್ಯಕ್ರಮ

**ಧಾರವಾಡ:**ಈಭಾಗದಚಿತ್ರಣವೇಬದ್ಲಾಗುತ್ತೆ ಅನ್ನೋಮಾತು ಒಬ್ಬರಿಗೂ ಅರ್ಥವಾಗಿಲೇ ಇಲ್ಲೆ ಕಾಣ್ತು. ಅರ್ಥವಾಗುವ ದಿನ ದೂರ ಇಲ್ಲೆ ಆನು ಮಾತಾಡಿದ್ರೆ ಮಳ್‌ಭಟ್ಟ ಅಂತ ಎಳ್ಕೊಂಡು ತಂದು ಹೊರಬಿಡ್ತ. ಆದರೆ ಈ ಸರಕಾರದವರು ಎಲ್ಲರನ್ನೂ ಎಳೆದು ಹೊರಗೆ ಬಿಡೋಕಾಲ ದೂರ ಇಲ್ಲೆ. ಯನ್ನನ್ನೂ ಮಾತ್ರ ಅಲ್ಲ, ನಿಂಗಳೆಲ್ಲರನ್ನೂ ನೆಲ ಬಿಡಿಸಿ, ನೆಲೆ ಚಪ್ಪಿಸ್ತ, ಸರಕಾರವೆಂಬೋ ದೈತ್ಯಶಕ್ತಿಗೆ ದೊಡ್ಡ ಹೆಗಡೆಯೂ ಒಂದೆ, ದನಕಾಯುವ ದ್ಯಾವನೂ ಒಂದೆ. ನೆನಪಿಡಿ ಮುಳುಗಿ ಮೂರಾಬಟ್ಟೆ ಆಗ್ತಿ ಜೋಗ ಪಟ್ಣಾಗ್ತು. ಗಾವುದಕ್ಕೊಂಗು ದೀಪವಾಗ್ತು ಆಕಾಶದ ತುಂಬ ವಿಷದ ಬಳ್ಳಿ ಹಬ್ತು’ ಎಂದು ಕೂಗುತ್ತಲೇ ಇದ್ದ".
ಸಾಗರದ ಸೀಮೆಯ ಈ ಅಚ್ಚಗನ್ನಡ ಮಾತುಗಳ ಪುಂಜ ಹವ್ಯಕ ಕನ್ನಡದ ಸವಿಯಿಂದ ತುಂಬಿಕೊಂಡು ಬರೆದಷ್ಟೇ ಸುಲಭವಾಗಿಘಟನೆಗಳುಒಂದನ್ನೊಂದನ್ನು ತೆಕ್ಕೆಗೆ ತೆಗೆದುಕೊಳುತ್ತ ಉಪನದಿಗಳೆಲ್ಲ ಸೇರುತ್ತ ಸೇರುತ್ತ ಸಮುದ್ರ ಸೇರುವಂತೆ ಈ ‘ಪುನರ್ವಸು’ ಬೃಹತ್‌ಕಾದಂಬರಿ ಭರ್ಜರಿ 534 ಪುಟಗಳಲ್ಲಿ ಹೆಣೆದುಕೊಂಡಿದ್ದು




ಕ್ ಊ ಂ ಡ್ ು ಕ್ ಊ ಂ ಡಾ ದ್ ರ್ ಊ ೀ, ಕಸಿದುಕೊಂಡಾದರೋ ಅಥವಾ ಕದ್ದಾ–ರೋ ಒಮ್ಮೆ ಓದಲೇಬೇಕಾದ ವಸ್ತುವಾಗಿದೆ ಎಂದು ಹಿರಿಯ ಚಿಂತಕ ಪ್ರೊ. ಹರ್ಷ ಡಂಬಳ ಅಭಿಪ್ರಾಯ ವ್ಯಕ್ತಪಡಿಸಿದರು.
ಧಾರವಾಡದ ಸಾಹಿತ್ಯಿಕ ಸಂಘಟನೆ ಅನ್ವೇಷಣ ಕೂಟವು ದಿ: 23ರಂದು ಸಾಧನಕೇರಿಯ ‘ಚೈತ್ರ’ದ ಸಭಾಗೃಹದಲ್ಲಿ ಹಮ್ಮಿಕೊಂಡಿದ್ದ "ಕಾದಂಬರೀ ಅವಲೋಕನ ಮತ್ತು ಸಂವಾದ" ಕಾರ್ಯಕ್ರಮದಲ್ಲಿ ಮುಖ್ಯಅತಿಥಿಯಾಗಿ ಬಂದು ಅವರು ಮಾತನಾಡುತ್ತಿದ್ದರು.
ಅವರು ಮುಂದುವರಿದು ಮಾತನಾಡಿ ಖ್ಯಾತಲೇಖಕ ಡಾ. ಗಜಾನನ ಶರ್ಮಾ, ಬೆಂಗಳೂರು ಅವರು ಅರ್ಥಪೂರ್ಣವಾಗಿ ಚಿತ್ರಿಸಿದ ಈ ಕಾದಂಬರಿಯ ಮೇಲಿನ ಅದರ ಮುಖಪುಟವೇ ಸಾರುತ್ತಿರುವ ಮುಳುಗಿದ್ದು ಭಾರಂಗಿಯೇ, ಭರವಸೆಯೇ? ಬದುಕೆ? ಎನ್ನುವ ಶರಾವತಿ ಜಲವಿದ್ಯುತ್ ಯೋಜನೆಯ ಮುಳುಗಡೆಯ ಪರಿಣಾಮವನ್ನು ಅತ್ಯಂತ ಪರಿಣಾಮಕಾರಿಯಾಗಿ ಅವರು ತೆರೆದಿಟ್ಟರು.
ಕಾರ್ಯಕ್ರಮವಾದ ಅಧ್ಯಕ್ಷತೆ ವಹಿಸಿದ್ದ ಹಿರಿಯ ಸಾಹಿತಿ ಡಾ. ವಿ.ಟಿ.ನಾಯಕ ಅವರು ಮಾತನಾಡಿ ಜೀವನಕ್ಕೆ ವಿದ್ಯುತ್ತು ಎಷ್ಟೇ ಅವಶ್ಯವೊ ಅಷ್ಟೇ ಪ್ರಮುಖವಾಗಿ ಶರಾವತಿಯಂಥ ಬೃಹತ್ ಜಲವಿದ್ಯುತ್ ಯೋಜನೆಯಿಂದಾಗುವ ಆಧುನಿಕ ಭ್ರಮೆಗಳು, ಪರೋಕ್ಷವಾಗಿ ಉಂಟಾಗುವ ಮೌಲ್ಯಗಳ ಅಧಃಪತನಗಳು, ಜೀವನದ ವಿಚ್ಛಿದ್ರತೆಗಳನ್ನು ತೀವ್ರವಾಗಿ ಗಮನಿಸಿ ಉದ್ದೇಶದ ಸದ್ಭಳಕೆಯತ್ತ ಲಕ್ಷ್ಯವಿಡಲೇಬೇಕೆಂದರು.
ನಂತರ ರೋಚಕ ಸಂವಾದ ಜರುಗಿತು.
ಅನ್ವೇಷಣಾ ಕೂಟದ ಅಧ್ಯಕ್ಷ ನರಸಿಂಹ ಪರಾಂಜಪೆ, ವೆಂಕಟೇಶ ದೇಸಾಯಿ, ರಾಜೀವ ಪಾಟೀಲ ಕುಲಕರ್ಣಿ ಗಣ್ಯರಾದ ಪ್ರೊ. ದುಷ್ಯಂತ ನಾಡಗೌಡ, ಡಾ. ಬಾಳಣ್ಣ ಶೀಗಿಹಳ್ಳಿ, ಡಾ. ಕೃಷ್ಣ ಕಟ್ಟಿ, ಮಹಾಬಲೇಶ್ವರ ಸಿಂದಗಿ, ಡಾ. ದೀಪಕ ಆಲೂರ, ಶ್ರೀನಿವಾಸ ಹುದ್ದಾರ, ಅನಂತ ಸಿದ್ದೇಶ್ವರ, ಕುಮಾರಸ್ವಾಮಿ ಪುರಾಣಿಕಮಠ, ಎಸ್.ವಿ. ದ್ವಾರಪಾಲಕ, ಡಾ.ಅರುಣ ಬಾಬು ಅಂಗಡಿ, ಬದರೀವಿಶಾಲ ಪರ್ವತೀಕರ, ರಮೇಶ ನಾಡಗೀರ, ಎಸ್.ಎಮ್. ದೇಶಪಾಂಡೆ, ಆರ್.ಎಸ್. ಗೋಜನೂರ, ಬಿ.ಜಿ. ಗುಂಡೂರ, ಎಂ.ವಿ. ಹೊಸಮನಿ. ಡಾ. ಮಂದಾಕಿನಿ ಪುರೋಹಿತ, ಆರ್. ವಿಮಲಾ, ಶೀಲಾ ಚೌಗುಲೆ, ಸರೋಜಾ ಕುಲಕರ್ಣಿ, ಸೀಮಾ ಪರಾಂಜಪೆ ಮುಂತಾದವರು ಉಪಸ್ಥಿತರಿದ್ದರು.

## ಭ್ರಷ್ಟಾಚಾರದಲ್ಲಿ ಮುಳುಗಿದ ಕಾಂಗ್ರೆಸ್: ತೆಂಗಿನಕಾಯಿ



**ಗುಳೇದಗುಡ್ಡ :** ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಇನ್ನು ಬಹಳ ದಿನ ಉಳಿಯುವುದಿಲ್ಲ. ಭ್ರಷ್ಟಾಚಾರದಲ್ಲಿ ಮುಳುಗಿ ಹೋಗಿದೆ. ಕಾಂಗ್ರೆಸ್ ಪಕ್ಷ ತನ್ನ ಅಸ್ತಿತ್ವ ಕಳೆದುಕೊಳ್ಳುವ ಕಾಲ ಸನ್ನಿತವಾಗಿದೆ. ಇವತ್ತು ಹಗರಣಗಳಲ್ಲಿ ಸಿಲುಕಿ ನರಳುತ್ತಿರುವ ರಾಜ್ಯದ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರವನ್ನ ಕಿತ್ತೊಗೆಯಬೇಕಾಗಿದೆ ಅದಕ್ಕಾಗಿ ನಾವು ಕೂಡ ಹೋರಾಟದ ದಾರಿಯನ್ನು ಹಿಡಿಯಬೇಕಿದೆ ಎಂದು ಹುಬ್ಬಳ್ಳಿ ವಿಧಾನ ಸಭೆ ಶಾಸಕ ಮಹೇಶ ತೆಂಗಿನಕಾಯಿ ಲೇವಡಿ ಮಾಡಿದರು.
ಪಟ್ಟಣದ ಲಂಬಾಣಿ ತಾಂಡಾದಲ್ಲಿ ಬಿಜೆಪಿ ಸದಸ್ಯತ್ವ ಅಭಿಯಾನ ಕಾರ್ಯಕ್ರಮದಲ್ಲಿ ಮಾತನಾಡಿ, ಸರ್ಕಾರ ಬಂದಾಗಿನಿಂದ ಒಂದು ವರ್ಷದಲ್ಲಿ ಮೂಡಾ ಹಗರಣ, ವಾಲ್ಮೀಕಿ ನಿಗಮದ ಬಹುಕೋಟಿ ಹಣವನ್ನು ದೋಚಿದ್ದು ಇದು ಕಾಂಗ್ರೆಸ್ ಸರಕಾರದ ದೊಡ್ಡ ಸಾಧನೆಗಳಾಗಿವೆ. 189 ಕೋಟಿ ರೂಪಾಯಿ ಹಗರಣ ಹೇಳಿದರೆ, ಸ್ವತಹ ಮುಖ್ಯಮಂತ್ರಿಗಳೇ 189 ಕೋಟಿ ಅಲ್ಲ, ಬರಿ 89 ಕೋಟಿ ಆಗಿದೆ ಎಂದು ಸ್ವತಃ ಮುಖ್ಯಮಂತ್ರಿಗಳೇ ಒಪ್ಪಿಕೊಂಡಿದ್ದಾರೆ. ಎಂದರು.
ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ ಮಾತನಾಡಿ, ಬಿಜೆಪಿದೇಶದಲ್ಲಿಯೇದೊಡ್ಡಪಕ್ಷ.ತತ್ವಸಿದ್ಧಾಂತದಮೇಲೆ ಬೆಳೆದು ಬಂದಿರುವ ಬಿಜೆಪಿ ಪಕ್ಷದ ಪ್ರತಿಯೊಬ್ಬರೂ ಸದಸ್ಯತ್ವ ಪಡೆದುಕೊಳ್ಳಬೇಕು. ದೇಶದಲ್ಲಿ ನರೇಂದ್ರ ಮೋದಿ ಸರ್ಕಾರ ಸಾಕಷ್ಟು ಜನಪರ ಯೋಜನೆಗಳನ್ನು ರೂಪಿಸಿದೆ. ಮಹಿಳೆಯರಿಗೆ, ಯುವ ಜನಾಂಗಕ್ಕೆ, ಹಿರಿಯರಿಗೆ ಅನೇಕ ಯೋಜನೆಗನ್ನು ಜಾರಿಗೆ ತಂದಿದೆ ಎಂದರು.
ಇದೇ ಸಂದರ್ಭದಲ್ಲಿ ತಾಂಡಾ ನಿವಾಸಿಗಳಿಂದ ಶಾಸಕ ಮಹೇಶತೆಂಗಿನಕಾಯಿಹಾಗೂಜಿಲ್ಲಾಧ್ಯಕ್ಷಶಾಂತಗೌಡ ಪಾಟೀಲ, ಪುರಸಭೆ ಮಾಜಿ ಅಧ್ಯಕ್ಷೆ ಭಾಗ್ಯಾ ಉದ್ನೂರ ಅವರನ್ನು ಸನ್ಮಾನಿಸಿದರು. ಬಿಜೆಪಿ ತಾಲೂಕಾ ಅಧ್ಯಕ್ಷ ನಾಗರಾಜ್ ಕಾಚಟ್ಟಿ, ವಸಂತ ಕಾಟವಾ, ಭಾಗ್ಯ ಉದ್ನೂರ, ಭುವನೇಶ್ ಪೂಜಾರ್, ಬಾಳು ನಿರಂಜನ್, ಮಧುಸೂದನ್ ರಾಂದಡ, ಸಂಪತಕುಮಾರ ರಾಠಿ, ಕಮಲಕಿಶೋರ್ ಮಾಲಪಾಣಿ, ಮೆಘಪ್ಪ ರಾಠೋಡ್, ರಂಗಪ್ಪ ವಾಲಿಕಾರ ಇತರರು ಇದ್ದರು.

## ಪಟ್ಟಸಾಲಿ ಸಮಾಜ ಬಾಗಲಕೋಟೆ ಸಂಘದ ವಾರ್ಷಿಕ ಸಭೆ



**ಬಾಗಲಕೋಟೆ :** ನಗರದ ಪಟ್ಟಸಾಲಿ ಸಮಾಜ ಬಾಗಲೋಟೆ ಸಂಘದ 2023–24 ನೇ ಸಾಲೀನ ವಾರ್ಷಿಕ ಸರ್ವ ಸಾಧಾರಣಾ ಸಭೆ ಜರುಗಿತು.
ಗುಳೆದಗುಡ್ಡದ ಪಟ್ಟಸಾಲಿ ಗುರುಪೀಠದ ಪೂಜ್ಯರಾದ ಶ್ರೀ ಬಸವರಾಜ ಪಟ್ಟದಾರ್ಯ ಮಹಾಸ್ವಾಮಿಗಳ ದಿವ್ಯ ಸಾನಿಧ್ಯದಲ್ಲಿ ನಡೆದ ಸಭೆಯಲ್ಲಿ 2022–23 ನೇ ಸಾಲಿನ ಸಾಮಾನ್ಯ ಸಭೆಯಲ್ಲಿ ಕೈಗೊಂಡ ನಿರ್ಣಯಗಳನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು, ಸದ್ಯ ಅಧಿಕಾರದಲದಲ್ಲಿರುವ ಕಾರ್ಯಕಾರಿ ಮಂಡಳಿಯನ್ನೇ ಮುಂದಿನ ಅವಧಿಯ ವರೆಗೆ ಮುಂದುವರಿಸಲು ಸರ್ವಾನುಮತದ ನಿರ್ಣಯ ಕೈಗೊಳ್ಳಲಾಯಿತು,ಸಭೆಯಲ್ಲಿ ಅಧ್ಯಕ್ಷರಾದ ಗಣೇಶ ನಾರಾ, ಪ್ರಧಾನಕಾರ್ಯದರ್ಶಿ ಸದಾನಂದ ನಾರಾ, ಸಮಾಜದ ಹಿರಿಯರಾದ ಶಿವಾನಂದ ನಾರಾ,ಶಿವಪ್ಪ ದೊಡ್ಡಮನಿ ಗುರುಗಳು, ಶಂಭುಲಿಂಗ ನಾರಾ, ಗುರುಪಾದಪ್ಪ ಜವಳಿ, ಚಂದ್ರಶೇಖರ ತಾಂಡೂರ, ಗುಳೆದಗುಡ್ಡದ ಪಟ್ಟಸಾಲಿ ಸಮಾಜದ ಅಧ್ಯಕ್ಷರಾದ ಈರಣ್ಣ ಶೇಖಾ, ಹಾಗೂ ಸಮಾಜದ ಎಲ್ಲಾ ಸದಸಯರುಗಳು ಹಾಜರಿದ್ದರು.

### ರಾಮಜನ್ಮಭೂಮಿ ದಿನ ಹುಟ್ಟಿದ ಮಗುವಿಗೆ ಠೇವಣಿ ಬಾಂಡ್ ವಿತರಣೆ, ಸನ್ಮಾನ ಕಾರ್ಯಕ್ರಮ

## ಲಾಲಬಹದ್ದೂರ ಶಾಸ್ತ್ರೀ ಸಂಘಕ್ಕೆ 6 ಲಕ್ಷ ಲಾಭ

**ಗುಳೇದಗುಡ್ಡ :** ಸಕಾಲದಲ್ಲಿ ಸಾಲ ಮರುಪಾವತಿ ಮಾಡಿದರೆ ಸಂಘವು ಆರ್ಥಿಕವಾಗಿ ಬೆಳವಣಿಗೆ ಹೊಂದಲು ಸಾಧ್ಯವಾಗುತ್ತದೆ. ಸಹಕಾರದ ತಳಹದಿಯ ಮೇಲೆ ನಿಂತಿರುವ ಸಹಕಾರಿ ಕ್ಷೇತ್ರಕ್ಕೆ ಶೇರುದಾರರೇ ಜೀವಾಳವಾಗಿದ್ದು, ಸಂಘದ ಸದಸ್ಯರ ಸಹಕಾರದಿಂದ ಸಂಘಕ್ಕೆ 6 ಲಕ್ಷ 57ಸಾವಿರ ಲಾಭವಾಗಿದೆ ಎಂದು ಲಾಲಬಹ್ದೂರ ಶಾಸ್ತ್ರೀ ಪತ್ತಿನ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷ ರಾಜು ತಾಪಡಿಯಾ ಹೇಳಿದರು.
ಅವರು ಪಟ್ಟಣದ ಲಾಲಬಹ್ದೂರ ಶಾಸ್ತ್ರೀ ಪತ್ತಿನ ಸೌಹಾರ್ದ ಸಹಕಾರಿ ಸಂಘದ ವಾರ್ಷಿಕ ಸಭೆ ಹಾಗೂ ಮಕ್ಕಳಿಗೆ ಠೇವು ಬಾಂಡ್ ವಿತರಣೆ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಸಂಘವು ಒಟ್ಟು 2141 ಸದಸ್ಯರನ್ನು ಹೊಂದಿದ್ದು, 49 ಲಕ್ಷ 79ಸಾವಿರ ಶೇರು ಬಂಡವಾಳ,




7 ಕೋಟಿ 2 ಲಕ್ಷ ಠೇವು, 6 ಕೋಟಿ 7 ಲಕ್ಷ ಸಾಲ, 7 ಕೋಟಿ 86 ಲಕ್ಷ ದುಡಿಯುವ ಬಂಡವಾಳ ಹೊಂದಿದೆ ಎಂದು ಹೇಳಿದರು.
ಕಾಡಸಿದ್ದೇಶ್ವರ ಮಠದ ಅಭಿನವ ಕಾಡಸಿದ್ದೇಶ್ವರ ಮಹಾಸ್ವಾಮಿಗಳು, ಗುರುಸಿದ್ದೇಶ್ವರ ಬ್ರಹನ್ಮಠದ ಗುರುಬಸವ ದೇವರು ಸಾನಿಧ್ಯ ವಹಿಸಿ ಮಾತನಾಡಿ, ಬಡ ಜನರ ಏಳಿಗೆಗೆ ಸಹಕಾರಿ ಕ್ಷೇತ್ರ ಸಾಕಷ್ಟು ಕೊಡುಗೆ ನೀಡುತ್ತಿದ್ದು, ಅದರಿಂದ ಪ್ರಯೋಜನ ಪಡೆದು ಸಹಕಾರಿ ಕ್ಷೇತ್ರವನ್ನು ಮತ್ತಷ್ಟು ಆರ್ಥಿಕವಾಗಿ ಸಧೃಡಗೊಳಿಸುವ ಕೆಲಸ ಮಾಡಬೇಕು. ಅಲ್ಲದೇ ರಾಮ ಮಂದಿರ ಉದ್ಘಾಟನೆ ದಿನ ಜನಿಸಿದ ಮಕ್ಕಳಿಗೆ 5ಸಾವಿರ ಹಣ ಠೇವಣಿ ಇರಿಸಿದ್ದು, ಶ್ಲಾಘನಿಯ ಎಂದರು.
ಉಪಾಧ್ಯಕ್ಷ ಪ್ರಶಾಂತ ಜವಳಿ ಮಾತನಾಡಿ, ನಮ್ಮ ಸಂಘದ ಸದಸ್ಯರ ಸಹಕಾರದಿಂದ ಆರ್ಥಿಕವಾಗಿ ಬಲಗೊಳ್ಳುತ್ತಿದೆ. ರಾಮ ಮಂದಿರ ಉದ್ಘಾಟನೆ ಸಮಯದಲ್ಲಿ ಜನಿಸಿದ ಮಕ್ಕಳಿಗೆ 5 ಸಾವಿರ ಠೇವಣಿ ಇರಿಸುವ ಭರವಸೆ ನೀಡಿದ್ದೇವು, ಅದರಂತೆ ಮಕ್ಕಳಿಗೆ ಸದ್ಯ ಠೇವಣಿ ಇರಿಸಿದ ಬಾಂಡ್ ವಿತರಿಸಲಾಗಿದೆ ಎಂದು ಹೇಳಿದರು.
ಈ ಸಂದರ್ಭದಲ್ಲಿ ನಿರ್ದೇಶಕರಾದ ಆರ್.ವಿ.ಸಾರಂಗಿ, ಆರ್.ಎಚ್. ಮಕಾನದಾರ, ಎಸ್.ಎಲ್.ರಾಠೋಡ, ಎಸ್.ಎಚ್.ಜಾಜು, ಎಸ್.ಕೆ.ಧಾರವಾಡ, ಎಂ.ಎಸ್.ಕಾಳನ್ನವರ, ಎಸ್.ಎಚ್. ಗೌಡರ, ಬಿ.ಡಿ.ನಿಡಸೋಶಿ, ಎಸ್. ಎಂ.ಸತ್ತಿಗೇರಿ, ಆರ್.ವೈ.ಪವಾರ, ಎಂ.ಸಿ.ಮಾವಿನಮರದ, ಎಸ್.ವಿ.ಖಾಜಿ, ಎಸ್.ಎಸ್.ಕಟಗಿ, ವ್ಯವಸ್ಥಾಪಕಿ ಭಾವನಾ ಅಲದಿ ಇತರರು ಇದ್ದರು.

## ಅವೈಜ್ಞಾನಿಕ ವಸತಿ ನಿಲಯ ರದ್ದುಗೊಳಿಸಲು ಶಾಸಕ ಆದೇಶ

**ಜಮಖಂಡಿ :** ಸತತ ಮಳೆ ನೀರಿನಿಂದ ಜಲಾವೃತಗೊಂಡಿದ್ದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅನುದಾನದಲ್ಲಿ ನಡೆಸಲಾಗುತ್ತಿರುವಭರತಗ್ರಾಮೀಣಾಭಿವೃದ್ಧಿ ಸಂಸ್ಥೆ ಬಾಲಕಿಯರ ವಸತಿ ನಿಲಯ ಮತ್ತು ಕಿವುಡಮತ್ತುಮೂಕಮಕ್ಕಳಶಾಲೆಪರವಾನಿಗೆ ರದ್ದು ಪಡಿಸುವಂತೆ ಇಲಾಖೆ ಅಧಿಕಾರಿಗಳಿಗೆ ಶಾಸಕ ಜಗದೀಶ ಗುಡಗುಂಟಿ ಸ್ಥಳದಲ್ಲಿಯೇ ಆದೇಶ ನೀಡಿದರು.
ಸುದ್ದಿಗಾರರೊಂದಿಗೆ ಶಾಸಕ ಜಗದೀಶ ಗುಡಗುಂಟಿ ಮಾತನಾಡಿ, ಬಾಲಕಿಯರ ವಸತಿ ನಿಲಯ ಮತ್ತು ಕಿವುಡ ಮತ್ತು ಮೂಕ ಮಕ್ಕಳ ಶಾಲೆಯನ್ನು ಕೆಳಅಂತಸ್ತುದಲ್ಲಿ ನಡೆಸಲಾಗುತ್ತಿದೆ. ಈ ನೆಲಮಹಡಿಯಲ್ಲಿ ಗಾಳಿ, ಬೆಳಕು ಇಲ್ಲ ಅವೈಜ್ಞಾನಿಕವಾಗಿ ಮಕ್ಕಳನ್ನು ಜಾನುವಾರುಗಳಂತೆ ಕೂಕಿ ಹಾಕಲಾಗಿದ್ದು, ಸೋಮವಾರ ರಾತ್ರಿ ಸುರಿದ ಭಾರಿ ಮಳೆಗೆ ಬಾಲಕಿರ ವಸತಿ ನಿಲಯ ಮತ್ತು ವಿಶೇಷ ಚೇತನ ಮಕ್ಕಳ ವಸತಿ ಶಾಲೆಗೆ ಭಾರಿ ಪ್ರಮಾಣದಲ್ಲಿ ಮಳೆ ನೀರು ನುಗ್ಗಿದೆ. ಮೋಲ್ವಿಚಾರಕರು ಮಕ್ಕಳನ್ನು ಒಂದೇ ಕೋಣೆಯಲ್ಲಿ ಕೂಡಿ ಹಾಕಿದ್ದು, ಸ್ವಲ್ಪ ಹೆಚ್ಚು ಕಡಿಮೆ ಆಗಿದ್ದರೆ ಮಕ್ಕಳ ಜೀವಕ್ಕೆ ತೊಂದರೆಯಾಗುವ ಸಂಭವ ಇತ್ತು ಎಂದರು.
ಸರ್ಕಾರದ ಅನುದಾನ ಪಡೆದು ಬಡಮಕ್ಕಳ ಜೀವದಜತೆಚಲ್ಲಾಟವಾಡುತ್ತಿರುವಇಂಥಹ ಸಂಸ್ಥೆಗಳ ಪರವಾನಿಗೆ ರದ್ದು ಪಡಿಸಬೇಕು. ಮಕ್ಕಳಿಗೆ ಸರಿಯಾದ ವ್ಯವಸ್ಥೆ ಕಲ್ಪಿಸಬೇಕು.



ಸಂಬಧಪಟ್ಟ ಇಲಾಖೆಗೆ ಇಲ್ಲಿನ ದುರಾಡಳಿತ ವ್ಯವಸ್ಥೆ ಕುರಿತು ಮಾಹಿತಿ ನೀಡಿ ಕೂಡಲೇ ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸುವಂತೆ ಸೂಚನೆ ನೀಡಲಾಗಿದೆ ಎಂದರು.
ಉಪವಿಭಾಗಾಧಿಕಾರಿ ಶ್ವೇತಾ ಬೀಡಿಕರ ಮಾತನಾಡಿ, ವಸತಿನಿಲಯ ಮತ್ತು ಶಾಲೆಯನ್ನುನಡೆಸುತ್ತಿರುವ ಸಿಬ್ಬಂದಿಗಳನ್ನು ತರಾಟೆಗೆ ತೆಗೆದುಕೊಂಡು ಮಕ್ಕಳನ್ನು ಜಾನುವಾರುಗಳಂತೆ ನಡೆಸಿಕೊಳ್ಳುತ್ತಿರುವ ನಿಮಗೆ ನಾಚಿಕೆ ಆಗುವುದಿಲ್ಲವೇ ಎಂದು ಪ್ರಶ್ನಿಸಿದರು. ಮಕ್ಕಳಿಗೆ ಸರಿಯಾದ ವ್ಯವಸ್ಥೆ ಕಲ್ಪಿಸಬೇಕು ಇಲ್ಲಿಯ ವ್ಯವಸ್ಥೆಯ ಕುರಿತು ಜಿಲ್ಲಾಧಿಕಾರಿಗಳಿಗೆ ಮಾಹಿತಿ ನೀಡಲಾಗಿದೆ. ಶಾಲೆ ಮತ್ತು ವಸತಿ ನಿಲಯಗಳನ್ನು ನಡೆಸುತ್ತಿರುವ ಸಂಸ್ಥೆಗಳಿಗೆ ನೋಟಿಸ್ ನೀಡಲಾಗಿದೆ ಎಂದರು.
ಇದೇಸಂದರ್ಭದಲ್ಲಿತಹಶೀಲ್ದಾರಸದಾಶಿವ ಮಕ್ಕೊಜಿ, ನಗರಸಭೆ ಅಧ್ಯಕ್ಷ ಪರಮಾನಂದ ಗವರೋಜಿ ಸಹಿತ ಹಲವರು ಇದ್ದರು.
ಉಪವಿಭಾಗಾಧಿಕಾರಿ ಮನೆಗೆ ನೀರು.....
ತಡರಾತ್ರಿವರೆಗೆ ಭಾರಿ ಪ್ರಮಾಣದಲ್ಲಿ ಧಾರಾಕಾರವಾಗಿ ಸುರಿದ ಮಳೆಯಿಂದಾಗಿ ನಗರದ ಉಪವಿಭಾಗಾಧಿಕಾರಿ ಶ್ವೇತಾ ಬೀಡಿಕರ ನಿವಾಸಕ್ಕೆ ಮಳೆ ನೀರು ನುಗ್ಗಿದೆ. ರಸ್ತೆಯಲ್ಲಿನ ಮಳೆ ನೀರು ಮತ್ತು ಚರಂಡಿಗಳು ತುಂಬಿ ಹರಿದ ಪರಿಣಾಮ ಉಪವಿಭಾಗಾಧಿಕಾರಿಗಳ ಮನೆ ನೀರು ನುಗ್ಗಿದೆ. ಬೆಳಗಿನ ಜಾವ ನಗರಸಭೆಯ ಪೌರಕಾರ್ಮಿಕರು ಕಸದ ವಾಹನ, ನೀರು ತುಂಬಿದ ಟ್ರ್ಯಾಕ್ಟರ್ ಟ್ಯಾಂಕ್ ಮೂಲಕ ಉಪವಿಭಾಗಾಧಿಕಾರಿ ನಿವಾಸದಲ್ಲಿ ತುಂಬಿದ ಕಸದರಾಶಿ, ಮಳೆ ನೀರು ಹೋಗುವ ವ್ಯವಸ್ಥೆ ಮಾಡಲಾಗಿದೆ.

